"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

29ನೇ ಜುಲೈ 2019
ಸೋಮವಾರ

## ವಿಷಯಾನುಕ್ರಮಣಿಕೆ

1. **ಪ್ರಕಟಣೆ**
2. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**
3. **ಶಾಸನ ರಚನೆ**

**ಅ)** ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ–2) ವಿಧೇಯಕ – 2019

– **ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)**

– **ಶ್ರೀ ಎಸ್.ಆರ್.ಪಾಟೀಲ್**

– **ಶ್ರೀ ಬಸವರಾಜ್ ಎಸ್.ಹೊರಟ್ಟಿ**

– **ಶ್ರೀ ತಿಪ್ಪಣ್ಣ ಕಮಕನೂರ**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ)** ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ – 2019

– **ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)**

– **ಶ್ರೀ ಪ್ರಕಾಶ್ ಕೆ.ರಾಥೋಡ್**

– **ಶ್ರೀ ಐವನ್ ಡಿ'ಸೋಜಾ**

– **ಶ್ರೀ ಕೆ.ಟಿ.ಶ್ರೀಕಂಠೇಗೌಡ**

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(101) 29.07.2019 03.30 ಎಸ್‌ವಿ-ಕೆಎಸ್**

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 29ನೇ ಜುಲೈ 2019**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಮಧ್ಯಾಹ್ನ 03 ಗಂಟೆ 32 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠವನ್ನು ಅಲಂಕರಿಸಿದರು.**

(ಸದನವು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭಗೊಂಡಿತು.)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ 29.07.2019ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಯೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರುತ್ತದೆ.

1) ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ–2) ವಿಧೇಯಕ – 2019
2) ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ 2019

## 2.ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿಯವರು:–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1) ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ–2) ವಿಧೇಯಕ – 2019
2) ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ – 2019

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3.ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ

### ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ–2) ವಿಧೇಯಕ, 2019

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, 2019ರ ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ –2) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, 2019–20ನೇ ಸಾಲಿನ 1,81,605 ಕೋಟಿ ರೂಪಾಯಿಗಳ ರಾಜಸ್ವ ವೆಚ್ಚ, 42,584 ಕೋಟಿ ರೂಪಾಯಿಗಳ ಬಂಡವಾಳ ವೆಚ್ಚ ಹಾಗೂ ಸಾಲದ ಮರುಪಾವತಿ 9,964 ಕೋಟಿ ರೂಪಾಯಿಗಳ ವೆಚ್ಚಗಳನ್ನೊಳಗೊಂಡು ಒಟ್ಟು ವೆಚ್ಚ 2,34,153 ಕೋಟಿ ರೂಪಾಯಿಗಳಾಗುತ್ತದೆಯೆಂದು ಆಯವ್ಯಯವನ್ನು ಮಂಡಿಸಲಾಗಿತ್ತು. 2019–20ರ ಫೆಬ್ರವರಿಯಲ್ಲಿ ಪೂರ್ಣ ವರ್ಷದ ಆಯವ್ಯಯವನ್ನು ವಿಧಾನ ಮಂಡಲದ ಮುಂದೆ ಮಂಡಿಸಲಾಗಿದ್ದು, ದಿನಾಂಕ 31.07.2019ರ ಅವಧಿಗೆ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಪಡೆಯಲಾಗಿತ್ತು. 2019–20ನೇ ಸಾಲಿನ ಪೂರ್ಣ ಆರ್ಥಿಕ ವರ್ಷಕ್ಕಾಗಿ ಆಯವ್ಯಯದ ಅನುಮೋದನೆಯನ್ನು ಕೋರಿ ಭಾರತದ ಸಂವಿಧಾನ ಪರಿಚ್ಛೇದ 203(3)ರ ಅನ್ವಯ ಗೌರವಾನ್ವಿತ ರಾಜ್ಯಪಾಲರ ಆದೇಶದೊಂದಿಗೆ ಬೇಡಿಕೆಗಳ ಸೂಚನೆಗಳನ್ನು ಹಾಗೂ ಪೂರ್ಣ ಆರ್ಥಿಕ ವರ್ಷಕ್ಕೆ ಧನವಿನಿಯೋಗ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲು ದಿನಾಂಕ 11.07.2019ರಂದು ಕಳುಹಿಸಲಾಗಿತ್ತು. ಆದರೆ ಹಿಂದಿನ ಸರ್ಕಾರ ಸದನದಲ್ಲಿ ವಿಶ್ವಾಸ ಮತ ಕಳೆದುಕೊಂಡಿದ್ದರಿಂದ ಪೂರ್ಣ ವರ್ಷಕ್ಕೆ ವೆಚ್ಚ ಮಾಡಲು ಆಯವ್ಯಯಕ್ಕೆ ಅನುಮೋದನೆಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. 2019–20ನೇ ಸಾಲಿನ ಆಯವ್ಯಯ ಮಂಡನೆಯ ಸಂದರ್ಭದಲ್ಲಿ ನಾಲ್ಕು ತಿಂಗಳುಗಳಿಗೆ 80,16,837.06 ಲಕ್ಷ ರೂಪಾಯಿಗಳಿಗೆ ಪಡೆಯಲಾಗಿರುವ ಲೇಖಾನುದಾನದ ಅವಧಿಯು ದಿನಾಂಕ 31.07.2019ಕ್ಕೆ ಅಂತ್ಯಗೊಳ್ಳುವುದರಿಂದ ಜುಲೈ 2019ರ ನಂತರ ಸರ್ಕಾರದ ಸಂಚಿತ ನಿಧಿಯಿಂದ ಯಾವುದೇ ವೆಚ್ಚವನ್ನು ಮಾಡಲು ಸಾಧ್ಯವಾಗುವುದಿಲ್ಲ. ಈ ಆರ್ಥಿಕ ಸಂಕಷ್ಟವನ್ನು ಮನಗಂಡು ಹಾಗೂ 2019–20ನೇ ಸಾಲಿನ ಪೂರ್ಣ ವರ್ಷದ ಆಯವ್ಯಯದ ಮೇಲೆ ಸದನದಲ್ಲಿ ಚರ್ಚಿಸಿ ಅನುಮೋದಿಸಲು ಸಾಕಷ್ಟು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲಾವಕಾಶದ ಅಗತ್ಯವಿರುವುದರಿಂದ 2019–20ನೇ ಸಾಲಿಗೆ ಪುನಃ ಮೂರು ತಿಂಗಳಿಗೆ ಲೇಖಾನುದಾನವನ್ನು ಪಡೆಯುವ ಅಗತ್ಯವಿರುತ್ತದೆ.

**(102)29.07.2019 ಕೆಜಿ–ಎಂಡಿ 3.40**

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಂದು.,.)–** ಮಾನ್ಯ ಸಭಾಪತಿಯವರೇ, ಆದ್ದರಿಂದ, 2019–2020ನೇ ಸಾಲಿನ ಹಣಕಾಸು ಭಾಗ ವರ್ಷಕ್ಕೆ ಈಗಾಗಲೇ ನಾಲ್ಕು ತಿಂಗಳಿಗೆ ಪಡೆದುಕೊಂಡ ಲೇಖಾನುದಾನಕ್ಕೆ ಹೆಚ್ಚುವರಿಯಾಗಿ ಮೂರು ತಿಂಗಳಿಗೆ ರೂ.48,72,692.45 ರಾಜಸ್ವ ವೆಚ್ಚಗಳು ಮತ್ತು ರೂ.14,02,409/– ಬಂಡವಾಳ ವೆಚ್ಚವನ್ನು ಒಳಗೊಂಡಿರುವ ಒಟ್ಟು ರೂ.62,75,101.45 ಲೇಖಾನುದಾನವನ್ನು ಮಂಜೂರು ಮಾಡಲು ಈ ಸದನದಲ್ಲಿ ಅನುಮತಿ ಕೋರಿ ಮಂಡಿಸುತ್ತಿದ್ದೇನೆ. ಈಗಾಗಲೇ ಇದಕ್ಕೆ ಕೆಳಮನೆಯಲ್ಲಿ ಅನುಮತಿ ಸಿಕ್ಕಿದೆ. ಈ ಸದನದಲ್ಲಿಯೂ ಅನುಮೋದನೆ ನೀಡಬೇಕೆಂದು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಯಾರಾದರೂ ಚರ್ಚೆ ಮಾಡುವುದಿದ್ದರೆ ಮಾಡಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆಳಮನೆಯಲ್ಲಿ ಇದಕ್ಕೆ ಅನುಮೋದನೆ ಸಿಕ್ಕಿದೆ. ಹಾಗಾಗಿ, ಮತ್ತೆ ಇದರ ಮೇಲೆ ಚರ್ಚೆ ಮಾಡುವುದು ಬೇಡ ಎನ್ನುವುದು ನನ್ನ ಅಭಿಪ್ರಾಯ. ನಾವು ಮಾನ್ಯ ಮುಖ್ಯ ಮಂತ್ರಿಯವರನ್ನು ಅಭಿನಂದಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಸರ್ಕಾರವನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಲಿ. ಅವರಿಗೆ ದೇವರು ಒಳ್ಳೆಯದು ಮಾಡಲಿ. ಅವರ ಪಾಲಿನ ಅಧಿಕಾರವನ್ನು ಅವರು ಮಾಡಲಿ. ನಮ್ಮ ಪಾಲಿನ ಕರ್ತವ್ಯವನ್ನು ನಾವು ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ಧನವಿನಿಯೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ನಮ್ಮ ದೋಸ್ತಿ ಸರ್ಕಾರದ ಕೂಸು ಇದ್ದಂತೆ. ಆ ವಿಧೇಯಕದ ಮೇಲೆ ವಿವರವಾಗಿ ಚರ್ಚೆ ಮಾಡುವುದಕ್ಕಿಂತ ಪೂರ್ವದಲ್ಲಿ ನಮ್ಮ ರಾಜ್ಯಕ್ಕೆ ನೂತನ ಮುಖ್ಯಮಂತ್ರಿಗಳಾಗಿ ಆಯ್ಕೆ ಆಗಿರುವಂತಹ ಗೌರವಾನ್ವಿತ ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಿದ್ದವನಹಳ್ಳಿಯ ಸನ್ಮಾನ್ಯ ನಿಜಲಿಂಗಪ್ಪನವರು ನಾಲ್ಕು ಬಾರಿ ಈ ರಾಜ್ಯದ ಮುಖ್ಯಮಂತ್ರಿಗಳಾದಂತಹ ಖ್ಯಾತಿಗೆ ಪಾತ್ರರಾಗಿದ್ದರು. ಆ ದಾಖಲೆಯನ್ನು ಸರಿಗಟ್ಟುವಂತಹ ರೀತಿಯಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಸಹ ನಾಲ್ಕನೆ ಬಾರಿಗೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಅವರಿಗೆ ಈ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು 2007, 2008, 2018 ಮತ್ತು 2019ನೇ ಸಾಲಿಗೆ 4 ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ.

ಮಾನ್ಯ ಸಭಾಪತಿಯವರೇ, ಅವರಿಂದ ನಾವು ನಿರೀಕ್ಷೆ ಮಾಡುವುದೇನೆಂದರೆ, ಈ ರಾಜ್ಯದ 6.50 ಕೋಟಿ ಜನರ ಕಲ್ಯಾಣಕ್ಕಾಗಿ ಅವರು ಶ್ರಮಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸಮಾಜದ ಎಲ್ಲಾ ವರ್ಗದ, ಜಾತಿ, ಮತ, ಪಂತ, ಪಂಗಡ ಮತ್ತು ಧರ್ಮೀಯರಲ್ಲಿ ಅನೇಕ ಬಡವರು ಇದ್ದಾರೆ, ಆ ಬಡವರ ಸಲುವಾಗಿ ಸರ್ಕಾರ ಚಿಂತನೆ ಮಾಡಬೇಕು. ಅದರಲ್ಲೂ ವಿಶೇಷವಾಗಿ ಸಮಾಜಿಕ ನ್ಯಾಯದಿಂದ ವಂಚಿತರಾದಂತಹ ಜನಾಂಗ, ನಿಕೃಷ್ಟವಾದಂತಹ ಜನಾಂಗ, ತೊಂದರೆಯಲ್ಲಿರುವಂತಹ ಜನಾಂಗ, ನೋವಿನಲ್ಲಿರುವಂತಹ ಜನಾಂಗದವರಿಗೆ ಈ ಸರ್ಕಾರದ ಅವಧಿಯುದ್ದಕ್ಕೂ ಶ್ರಮಿಸಬೇಕು. ಅಲ್ಲದೇ, ಮಾನ್ಯ ಮುಖ್ಯಮಂತ್ರಿಯವರ ಹಿರಿತನದಲ್ಲಿ ಈ ರಾಜ್ಯಕ್ಕೆ ಕಲ್ಯಾಣವಾಗಲಿ ಎಂದು ಹೇಳುವುದರ ಜೊತೆಗೆ ಬೆನ್ನು ಇಲ್ಲದವರಿಗೆ, ಅಂತಹವರನ್ನು ಬೆನ್ನು ಸತ್ತವರು ಎಂದು ಹೇಳುತ್ತಾರೆ. ಅಂತಹವರಿಗೆ ಅವರ ಹಿಂದೆ ಯಾವ ರಾಜಕೀಯ ಶಕ್ತಿಯು ಇರುವುದಿಲ್ಲ. ಇವತ್ತಿನ ದಿವಸ ಪ್ರತಿಯೊಬ್ಬರಿಗೂ ಒಬ್ಬ ಬಲಿಷ್ಠವಾದಂತಹ ರಾಜಕಾರಣಿಯನ್ನು ಹಿಂದೆ ಇಟ್ಟುಕೊಂಡು ನಡೆಯುವುದನ್ನು ಪ್ರತಿ ದಿವಸ ಅವರು ನೋಡಿದ್ದಾರೆ, ನಾವು ನೋಡಿದ್ದೇವೆ. ಅಂತಹ ಬೆನ್ನು ಇಲ್ಲದವರಿಗೆ ಮತ್ತು ರಾಜಕೀಯ ಬೆಂಬಲ ಇಲ್ಲದಂತಹ ಜನಾಂಗದವರಿಗೆ ವಿಶೇಷವಾದಂತಹ ಕಾಳಜಿಯನ್ನು ವಹಿಸಬೇಕು. ಅಲ್ಲದೇ, ಇಡೀ ದೇಶದಲ್ಲಿಯೇ ನಮ್ಮ ರಾಜ್ಯ ನಂಬರ್-ಒನ್ ರಾಜ್ಯ ಆಗುವುದಕ್ಕೆ ಪ್ರಯತ್ನ ಪಡಬೇಕು. ಅದು ಒಳ್ಳೆಯದಕ್ಕೆ ಮಾತ್ರ, ಕೆಟ್ಟದಕ್ಕೆ ಅಲ್ಲ. ಅಭಿವೃದ್ಧಿ ವಿಚಾರದಲ್ಲಿಯಾಗಲಿ ಅಥವಾ ಅತ್ಯುತ್ತಮ ಕಾರ್ಯಕ್ರಮ ಕೊಡುವುದರ ಮೂಲಕವಾಗಲಿ ನಮ್ಮ ಇಡೀ ದೇಶದಲ್ಲಿಯೇ ನಮ್ಮ ರಾಜ್ಯವನ್ನು ನಂಬರ್-ಒನ್ ರಾಜ್ಯ ಆಗುವುದಕ್ಕೆ ಅವರು ಶತಾಯಗತಾಯ ಪ್ರಯತ್ನ ಪಡಬೇಕೆಂಬ ಮಾತನ್ನು ಹೇಳುವುದರ ಜೊತೆಗೆ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕ ಭಾಗದ ಬಗ್ಗೆ ಬಹಳ ಕಾಳಜಿ ಇರಬೇಕಾಗಿದೆ. Colonial Government ಅಂದರೆ ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂತಹ ಬ್ರಿಟಿಷರು ಇಡೀ ದೇಶವನ್ನು ಆಳುವಂತಹ ಸಂದರ್ಭದಲ್ಲಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ದೊಡ್ಡ ಹೋರಾಟ ನಡೆದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತರೂ ಸಹ ಉತ್ತರ ಕರ್ನಾಟಕ ಭಾಗದವರು ಅನೇಕ ವಿಚಾರದಲ್ಲಿ ಬಹಳಷ್ಟು ನೋವನ್ನು ಇಂದಿಗೂ ಅನುಭವಿಸುವಂತಹ ಪರಿಸ್ಥಿತಿ ಇದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ನೂತನವಾಗಿ ಮುಖ್ಯಮಂತ್ರಿಗಳಾದ ನಂತರ ಅವರು ಮಾಡಿದಂತಹ ಭಾಷಣವನ್ನು ನಾನು ಕೇಳಿದ್ದೇನೆ. ಅವರು ನೇಕಾರರ ಸಾಲವನ್ನು ಮನ್ನಾ ಮಾಡಿದ್ದಾರೆ. ಅದರ ಜೊತೆಗೆ ಮಾನ್ಯ ಪ್ರಧಾನ ಮಂತ್ರಿಯವರ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯಕ್ರಮದಡಿ ಕೃಷಿಕರಿಗೆ ನೀಡುತ್ತಿರುವ ರೂ.6000/- ಗಳ ಜೊತೆಗೆ ರೂ.4,000/- ಗಳನ್ನು ಕೊಡುವುದಾಗಿ ಘೋಷಣೆ ಮಾಡಿದ್ದಾರೆ. ಅದಕ್ಕಾಗಿ ನಾವು ಮಾನ್ಯ ಮುಖ್ಯ ಮಂತ್ರಿಯವರನ್ನು ಅಭಿನಂದಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ರೈತ ಮತ್ತು ನೇಕಾರರು ತನ್ನ ಎರಡು ಕಣ್ಣುಗಳಿದ್ದಂತೆ ಎಂದು ಹೇಳಿದ್ದಾರೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಮೂಲಕ ಕಾವೇರಿ-ಕೃಷ್ಣೆ ಕನ್ನಂಬಾಡಿಯ ಎರಡು ಕಣ್ಣುಗಳಿದ್ದಂತೆ ಎಂದು ತಿಳಿದು ಕೆಲಸ ಮಾಡಬೇಕೆಂದು ಸಲಹೆ ನೀಡಬಯಸುತ್ತೇನೆ. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಆಗಬಾರದು. ಕೃಷ್ಣೆಗೂ ಸಹ ನ್ಯಾಯ ದೊರಕಬೇಕು. ಉತ್ತರ ಕರ್ನಾಟಕ ಭಾಗದ ಜೀವನಾಡಿಯಾದಂತಹ ಕೃಷ್ಣೆಗೂ ಸಹ ತಮ್ಮ ಅವಧಿಯಲ್ಲಿ ನ್ಯಾಯ ದೊರಕಿಸಿಕೊಡಬೇಕು ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆಗಳಿಗೆ ಪ್ರಾಮುಖ್ಯತೆ ಕೊಡಬೇಕು. ನಮ್ಮ ಹಿರಿಯ ಸದಸ್ಯರು ಹೇಳಿದಂತೆ, ಮಹದಾಯಿ ಇರಬಹುದು, ಕೃಷ್ಣೆ ಇರಬಹುದು ಮತ್ತು ಕಳಸಾ-ಬಂಡೂರಿ ಇರಬಹುದು ಅಲ್ಲಿ ವಿಶೇಷವಾಗಿ ರೂ.1,05,000 ಕೋಟಿ ರೂಪಾಯಿಗಳ ಬೃಹತ್ ಯೋಜನೆ ಆಗಿದೆ. 130 ಟಿಎಂಸಿ ನೀರು ನಮಗೆ allocation ಆಗಿದೆ. ರೂ.1,05,000 ಕೋಟಿ ರೂಪಾಯಿಗಳ ಹಣ ಇದೆ. ಅದಕ್ಕೆ ಬೇಕಾಗಿರುವಂತಹ cost of project ಅದರಲ್ಲಿ ಈ ಬಾರಿ ರೂ.1.50,000 ಕೋಟಿಗಳು ಬಂದಿದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಇವತ್ತು ಪೂರಕ ಅಂದಾಜುಗಳನ್ನು ಮಂಡಿಸುತ್ತಿದ್ದಾರೆ, ಅದರಲ್ಲಿ ವಿಶೇಷವಾಗಿ ಕೃಷ್ಣ ಮೇಲ್ದಂಡೆ ಯೋಜನೆಗೆ ರೂ.1,50,000 ಕೋಟಿ ಇದೆಯಲ್ಲ ಅದು ರೂ.1,05,000 ಕೋಟಿ ರೂಪಾಯಿಗಳ ಬೃಹತ್ ಯೋಜನೆಗೆ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತಾ ಹೋದರೆ ಏನಾಗುತ್ತದೆ ಎಂದರೆ, without escallation 100 ವರ್ಷ ಆಗುತ್ತದೆ, escallation ಆದರೆ 200 ವರ್ಷಗಳು ಆಗುತ್ತದೆ. ನಮ್ಮ ಮಕ್ಕಳು, ಮರಿ ಮೊಮ್ಮಕ್ಕಳು ಅದನ್ನು ನೋಡುತ್ತಾರೆಯೋ ಅಥವಾ ಇಲ್ಲವೋ ಎನ್ನುವಂತಹ ಪರಿಸ್ಥಿತಿ ಉದ್ಭವವಾಗಿದೆ.

ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಯವರ ಬಳಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಪೂರಕ ಅಂದಾಜುಗಳನ್ನು ಸಹ ಮಂಡಿಸುತ್ತಿದ್ದಾರೆ. ಆದ್ದರಿಂದ ಈ ಯೋಜನೆಗೆ ಒತ್ತು ಕೊಟ್ಟು ಒಂದು ಲಕ್ಷ ಐದು ಸಾವಿರ ಕೋಟಿ ರೂಪಾಯಿಗಳ ಕೃಷ್ಣಾ ಬೃಹತ್ ಮೇಲ್ದಂಡೆ ಯೋಜನೆಯಲ್ಲಿ 130 ಟಿ.ಎಂ.ಸಿ ನೀರನ್ನು ಸಂಗ್ರಹಣೆ ಮಾಡಬೇಕು. ಅಣೆಕಟ್ಟೆಯ ಎತ್ತರವನ್ನು 519.6 ರಿಂದ 524.256 ಮೀಟರ್‌ವರೆಗೆ ಎತ್ತರಿಸುವಂತಹ ಯೋಜನೆ ಇದಾಗಿದ್ದು, ಇದರಲ್ಲಿ 130 ಟಿ.ಎಂ.ಸಿ ನೀರನ್ನು ಸಂಗ್ರಹಣೆ ಮಾಡಲಾಗುತ್ತದೆ. ಅದರ ಮೂಖಾಂತರ 14 ಲಕ್ಷ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಕರೆಗಳಿಗೆ ನೀರಾವರಿ ಆಗುವುದರಿಂದ ಈಗ ನಾವು ಆ ನೀರಾವರಿ ಸೌಲಭ್ಯದಿಂದ ವಂಚಿತರಾಗಿದ್ದೇವೆ. ಯಾವುದೇ ಸರ್ಕಾರ ಇರಲಿ ಅಥವಾ ಯಾರೇ ಮುಖ್ಯಮಂತ್ರಿಯಾಗಿರಲಿ ಉತ್ತರ ಕರ್ನಾಟಕ ಭಾಗದ ಕೃಷ್ಣೆಗೆ ಏನು ನ್ಯಾಯ ದೊರೆಯಬೇಕಾಗಿತ್ತು, ಅದು ದೊರೆತಿರುವುದಿಲ್ಲ. ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಯವರ supplementary budget ನಲ್ಲಿ ಒಂದು ಲಕ್ಷ ಐದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಆ ಯೋಜನೆ ನಾಲ್ಕು ವರ್ಷಗಳಲ್ಲಿ ಮುಗಿಯಬೇಕು. ಮಾನ್ಯ ಮುಖ್ಯ ಮಂತ್ರಿಯವರ ಅವಧಿ ಇನ್ನೂ ಮೂರು ವರ್ಷ ಹತ್ತು ತಿಂಗಳು ಇದೆ. ನಾವು ಮಾನ್ಯ ಮುಖ್ಯಮಂತ್ರಿಯವರನ್ನು ಮೂರು ವರ್ಷ ಹತ್ತು ತಿಂಗಳು ಕಾಲ ಅಧಿಕಾರದಲ್ಲಿ ಇರಲಿ ಎಂದು ಹೇಳುವವರು. ನಾವು ಅವರಿಗೆ ಎಂದೂ ಅಡ್ಡಿ ಮಾಡುವುದಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಅವರ ಪಕ್ಷದವರ ಬಗ್ಗೆಯೇ ಸ್ವಲ್ಪ ಕಾಳಜಿ ವಹಿಸಬೇಕಾಗುತ್ತದೆ. ಏಕೆಂದರೆ, 2008 ರಲ್ಲಿ ಏನಾಗಿತ್ತು ಎಂಬುದು ಅವರಿಗೆ ಗೊತ್ತಿದೆ. ನಾವು ಆ ವೇಳೆಯಲ್ಲಿ ವಿರೋಧ ಪಕ್ಷದಲ್ಲಿ ಇದ್ದೆವು. ನಾವು ಆ ಸಂದರ್ಭದಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಚೆನ್ನಾಗಿ ಆಡಳಿತವನ್ನು ಕೊಡಲಿ ಎಂದು ಹೇಳುತ್ತಿದ್ದೆವು. ಆದರೆ, ಅವರ ಪಕ್ಷದಲ್ಲಿಯೇ ಏನೇನೋ ಮಾಡಿ ಅವರ ವಿರುದ್ಧ ಮೊಕದ್ದಮೆ ದಾಖಲಿಸಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರನ್ನು ಅಧಿಕಾರದಿಂದ ಕೆಳಗೆ ಇಳಿಸುವಂತಹ ವ್ಯವಸ್ಥೆ ಮಾಡಿದರು. ಆದರೆ, ಈ ಬಾರಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಬಹಳ ಹುಷಾರಾಗಿ ಇರಬೇಕು. ಈಗ ಅವರು ಹುಷಾರಾಗಿ ಇರುತ್ತಾರೆಂದು ನನಗೆ ಅನಿಸುತ್ತದೆ. ಅವರು ಬಿಜೆಪಿಯಲ್ಲಿ ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರು. ನಂತರ ಅವರು ಬಿಜೆಪಿಯನ್ನು ತ್ಯಜಿಸಿ ಕೆಜೆಪಿಯನ್ನು ಸ್ಥಾಪನೆ ಮಾಡಿ ಆಳುವ ಪಕ್ಷ ಬಿಜೆಪಿಯನ್ನು ವಿರೋಧ ಪಕ್ಷ ಸಹ ಆಗದಂತಹ ಸ್ಥಿತಿಯನ್ನು ನಿರ್ಮಾಣ ಮಾಡಿದ್ದರು. ಇದರ ಬಗ್ಗೆ ಅವರಿಗೆ ಅಂಜಿಕೆ ಇದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಅವರು ಅಷ್ಟು ಸರಳವಾಗಿ ಬಿಡುವುದಿಲ್ಲ. ಈಗಾಗಲೇ ಒಂದು punishment ಕೊಟ್ಟಿದ್ದಾರೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಮ್ಮ ಕಡೆ 'ಮುಟ್ಟಿ ಮುಟ್ಟಿ ನೋಡಿಕೊಳ್ಳುವಂತೆ' ಎಂದು ಹೇಳುತ್ತಾರೆ, ಆ ರೀತಿ ಅವರು ಮಾಡಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರಿಯವರೇ ಮಾಡಿದ್ರಾ!

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೂಜಾರಿಯವರೇ ಮಾಡಿದ್ದಾರೆಂದು ನಾನು ಹೇಳಿಲ್ಲ. ಅವರು ನಮ್ಮ ಎದುರಿಗೆ ಇದ್ದಾರೆ, ಹಾಗಾಗಿ ಅವರ ಹೆಸರು ಹೇಳುತ್ತಿದ್ದೇನೆ. ನಾನು ಬಿಲ್ ಮೇಲೆ ಮಾತನಾಡುತ್ತಿದ್ದೇನೆ. ಅವರಿಗೆ (ಶ್ರೀ ಕೆ.ಸಿ.ಕೊಂಡಯ್ಯನವರನ್ನು ಉದ್ದೇಶಿಸಿ) ಇದರಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋವು ಆಗುತ್ತಿದೆಯೇ? ಹಾಗಿದ್ದರೆ ಅವರು ನಾನು ಮಾತನಾಡುವುದು ಬೇಡವೆಂದರೆ ಬಿಟ್ಟುಬಿಡುತ್ತೇನೆ. I am always above party. ನಾನು ಯಾವುದೇ ಪಕ್ಷ ಇರಲಿ ಅಥವಾ ನಮ್ಮ ಪಕ್ಷದವರು ಮಾಡಿದ್ದರೂ ಸಹ ಅನ್ಯಾಯವಾಗಿದ್ದನ್ನು ನೇರವಾಗಿ ಖಡಾಖಂಡಿತವಾಗಿ ಮಾತನಾಡುವಂತಹ ಮನೋಭಾವ ಇರುವವನು. ಆ ದೃಷ್ಟಿಯಿಂದ ಮಾತನಾಡಿದ್ದೇನೆ. ಅದೇರೀತಿ ಈ ಬಾರಿಯೂ ಸಹ ಮಾಡುವುದಕ್ಕೆ ಹೋಗಿಬಿಟ್ಟಾರೋ ಏನೋ, ಅದಕ್ಕೆ ಸ್ವಲ್ಪ ಹುಷಾರಾಗಿರಿ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಈ ಬಾರಿ ಯಾವ ರೀತಿ ಮುಖ್ಯಮಂತ್ರಿ ಆದರು ಎಂದು ಹೇಳುವ ಸಂಗತಿಗಳಿಗೆ ನಾನು ಹೋಗುವುದಿಲ್ಲ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸಹ ಅತ್ಯುತ್ತಮವಾದಂತಹ ಕೆಲಸವನ್ನು ಮಾಡಿದ್ದರು ಎನ್ನುವ ವಿಷಯವನ್ನು ನಾನು ನೆನಪಿಸಿಕೊಳ್ಳುತ್ತಿದ್ದೇನೆ. ರೈತರ ಸಾಲ ಮನ್ನಾ, ಸಹಕಾರ ಸಂಘಗಳಲ್ಲಿನ ಸಾಲವಾಗಲಿ, ರಾಷ್ಟ್ರೀಕೃತ ಬ್ಯಾಂಕಿನ ಸಾಲವಾಗಲಿ, ಬೀದಿ ವ್ಯಾಪಾರಿಗಳಿಗೆ ಸಹಾಯ ಮಾಡುವುದಾಗಲಿ ಮತ್ತು ಅದರಲ್ಲೂ ವಿಶೇಷವಾಗಿ ಖಾಸಗಿ ಲೇವಾದೇವಿದಾರರಿಂದ ಸಾಲಗಾರರನ್ನು ಮುಕ್ತ ಮಾಡುವಂತಹ ಅನೇಕ ಕಾರ್ಯಕ್ರಮಗಳನ್ನು ಅವರು ಮಾಡಿದ್ದರು.

(103)29-07-2019(3-50)ಎಂವಿ-ಎಕೆ

**ಶ್ರೀ ಎಸ್.ಆರ್.ಪಾಟೀಲ್(ಮುಂದು...):-**

ಅವರು ವಿಶ್ವಾಸಮತ ಯಾಚನೆ ಮಾಡುವಂತಹ ಸಂದರ್ಭದಲ್ಲಿ, ಕೆಳಮನೆಯಲ್ಲಿ ನಾಲ್ಕು ದಿನಗಳ ಕಾಲ ಸುದೀರ್ಘವಾದಂತಹ ಚರ್ಚೆಯಾಗಿದ್ದು ಇದನ್ನು ಇಡೀ ರಾಜ್ಯದ ಜನತೆ ಮತ್ತು ಇಡೀ ದೇಶದ ಜನತೆ ನೋಡಿದ್ದಾರೆ. ಆದುದರಿಂದ ನಾನು ಅದರ ಗೊಡವೆಗೆ ಹೋಗುವುದಿಲ್ಲ. ಈ ಸಂತೋಷದ ಸಂಭ್ರಮದಲ್ಲಿ ನೀವು ಭವಿಷ್ಯತ್‌ನಲ್ಲಿ ಏನು ಮಾಡಬೇಕು ಎನ್ನುವ ಬಗ್ಗೆ ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ಒಟ್ಟಾರೆಯಾಗಿ ಛಲಬಿಡದ ತ್ರಿವಿಕ್ರಮನಂತೆ ಎಂದು ಹೇಳಿದ್ದಾರೆ ಎನ್ನುವ ಗುರಿಯನ್ನು ತಲುಪಿದ್ದೀರಿ. ನನ್ನದು ಬೀಳಗಿ ತಾಲ್ಲೂಕು. ಮಾನ್ಯ ಹೊರಟ್ಟಿಯವರೇ, ಒಮ್ಮೆ ರಾಮಕೃಷ್ಣ ಆಶ್ರಮದವರು...

**(ಗೊಂದಲ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ ಬಹಳ ಜನರದ್ದು ಧ್ವನಿ ಬರುತ್ತದೆ. ಆದರೆ, ಮಾನ್ಯ ಹೊರಟ್ಟಿಯವರ ಧ್ವನಿ ಇನ್ನೂ ಬಂದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ನಮ್ಮ ಮತ್ತು ಅವರ ಊರು ಅಕ್ಕಪಕ್ಕ ಇದೆ. ಅದಕ್ಕೆ ನಾನು ಅವರ ಕಡೆ ಹೇಳುತ್ತಿರುತ್ತೇನೆ. ನನ್ನ ಧ್ವನಿ ಅಡ್ಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಿದ್ದಿಲ್ಲ. ನಾನು ಅಲ್ಲಿ ಇದ್ದಾಗ ಕೃಷ್ಣೆಯ ಬಗ್ಗೆ ಮಾತನಾಡುವುದಕ್ಕೆ ದುರ್ದೈವವಶಾತ್ ಅವಕಾಶ ಬರಲಿಲ್ಲ. ನೀವು ಅಜೆಂಡಾ ನೋಡಿ, ಅದು ಪ್ರತಿದಿವಸ ಬಂದಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ನಾನು ಏನನ್ನು ಮಾತನಾಡುತ್ತಿದ್ದೆ ಎನ್ನುವುದು ಬಹಳ ಇದೆ. ಆದರೆ, ಇವತ್ತು ಮಾತನಾಡುವುದಕ್ಕೆ ಆಗುವುದಿಲ್ಲ. ನಾನು ಸಂಕ್ಷಿಪ್ತವಾಗಿ ಟೈಟಲ್ ಕೊಟ್ಟಿದ್ದೇನೆ. ನೀವು ಗುರಿ ತಲುಪಿದ್ದೀರಿ. ನಾವು ನಮ್ಮ ತಾಲ್ಲೂಕಿನ ಸ್ವಾತಂತ್ರ್ಯೋತ್ಸದ ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಮುಖ್ಯಸ್ಥರನ್ನು ಕರೆಸಿದ್ದೆವು. ಮಾನ್ಯ ನಿರಾಣಿಯವರೇ, ಶ್ರೀ ರಾಮಕೃಷ್ಣ ಆಶ್ರಮದ ಮುಖ್ಯಸ್ಥರನ್ನು ಕರೆಸಿದ್ದಾಗ ನಾನು ಇನ್ನೂ ಶಾಸಕನಾಗಿರಲಿಲ್ಲ. ಅವರು ಒಂದು ಮಾತನ್ನು ಹೇಳಿದರು, "ನೀವು ಗುರಿ ಮುಟ್ಟುವುದಕ್ಕೆ ಯಾವುದಾದರೂ ಮಾರ್ಗವನ್ನು ಹಿಡಿಯಿರಿ, by hook or crook, ಶತಾಯಗತಾಯ ಪ್ರಯತ್ನ ಮಾಡಿ ಗುರಿ ಮುಟ್ಟಬೇಕು. ಗುರಿ ಮುಟ್ಟಿದ ಮೇಲೆ ನಿಮ್ಮ ವಿಚಾರಧಾರೆಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರಬೇಕು. ಅಂದರೆ, ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ, ದಕ್ಷತೆಯಿಂದ, ಸೇವಾ ಮನೋಭಾವದಿಂದ, ಕರ್ತವ್ಯ ಪ್ರಜ್ಞೆಯಿಂದ ಮತ್ತು ಕರ್ತವ್ಯವೇ ದೇವರು ಎನ್ನುವ ಭಾವನೆಯಿಂದ ಜನಪರ ಕೆಲಸಗಳನ್ನು ಮಾಡುವುದು." ಈಗ ನೀವು ಗುರಿಯನ್ನು ಮುಟ್ಟಿದ್ದೀರಿ. ಆದರೆ, ನೀವು ಗುರಿಯನ್ನು ಹೇಗೆ ಮುಟ್ಟಿದ್ದೀರಿ ಎನ್ನುವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಗುರಿ ಮುಟ್ಟಿದ್ದೀರಿ. ಈಗ ನೀವು ಈ ರಾಜ್ಯದ ಕಲ್ಯಾಣಕ್ಕಾಗಿ, ಬಡವರ ಕಲ್ಯಾಣಕ್ಕಾಗಿ, ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇನೆ ಎಂದು ತಾವು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಅಂದರೆ, ಅಭಿವೃದ್ಧಿಯ ಪರ್ವ ಪ್ರಾರಂಭವಾಯಿತು ಎಂದು. ನಮಗೆ ಅದೇ ಬೇಕಾಗಿರುವುದು. ನಾವು ಇಲ್ಲಿಗೆ ಬಂದಿದ್ದೇವೆಂದು ನಮಗೆ ಬೇಸರವಿಲ್ಲ. ಇದರಿಂದ ನಮಗೆ ಖುಷಿ ಇದೆ. ಪ್ರಜಾಪ್ರಭುತ್ವದಲ್ಲಿ ತಾವು ಆಳುವ ಪಕ್ಷದಲ್ಲಿದ್ದೀರಿ. ಆಳುವ ಪಕ್ಷ ಮತ್ತು ಪ್ರತಿಪಕ್ಷ ನಾಣ್ಯದ ಎರಡು ಮುಖವಿದ್ದಂತೆ. ಆಳುವ ಪಕ್ಷಕ್ಕೆ ಎಷ್ಟು ಮಹತ್ವ ಇದೆಯೋ, ಪ್ರತಿಪಕ್ಷಕ್ಕೂ ಕೂಡ ಅಷ್ಟೇ ಮಹತ್ವ ಇದೆ. ಏಕೆಂದರೆ, ಆಳುವ ಪಕ್ಷ ಹೇಗಿರುತ್ತದೆ ಎಂದರೆ, ಮದ ಬಂದ ಆನೆ ಇದ್ದ ಹಾಗೆ ಮತ್ತು ಪ್ರತಿಪಕ್ಷದವರು ಮಾವುತ ಇದ್ದ ಹಾಗೆ. ಅದನ್ನು ಕಂಟ್ರೋಲ್ ಮಾಡಲಿಲ್ಲವೆಂದರೆ ಆಸ್ತಿಹಾನಿ ಮತ್ತು ಪ್ರಾಣಹಾನಿ ಆಗುವ ಸಾಧ್ಯತೆ ಇದೆ. ನಾವು ಮಾವುತನ ಕೆಲಸ ಮಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ನೀವು ಇಲ್ಲಿ ಇದ್ದಿರಿ. ಆದರೆ, ನೀವು ಅದರ ಗೊಡವೆಗೆ ಹೋಗಲಿಲ್ಲ. ನೀವು ಆರು ಬಾರಿ attempt ಮಾಡಿದ್ದೀರಿ, ಕಡೆಗೆ ಏಳನೇ ಬಾರಿ ಯಶಸ್ವಿಯಾಗಿದ್ದೀರಿ. ಅದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ನಾವು ಪ್ರತಿಪಕ್ಷದಲ್ಲಿ ಇದ್ದುಕೊಂಡು, ಈ ನಾಡಿನ ಜನತೆಯ ಬಗ್ಗೆ ನೀವು ಎಲ್ಲಿ ದಾರಿ ತಪ್ಪುತ್ತೀರಿ ಮತ್ತು ಎಲ್ಲಿ ಎಡವುತ್ತೀರಿ ಎಂಬುದನ್ನು ನಿಸ್ಸಂಶಯವಾಗಿ ಹೇಳುತ್ತೇವೆ. ನಾನು ಹೇಳುವುದೇನೆಂದರೆ ಆಳುವ ಪಕ್ಷ ಎಂದರೆ ಹುಚ್ಚು ಹೊಳೆ ಎನ್ನುತ್ತಾರೆ. ಈಗ ಹುಚ್ಚು ಹೊಳೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ flood ಬಂದಿರುತ್ತದಲ್ಲ ಆ ರೀತಿ, ಈಗ flood ಗೆ embankment ಹಾಕಲಿಲ್ಲವೆಂದರೆ ಮತ್ತು ಅದನ್ನು ವ್ಯವಸ್ಥಿತವಾಗಿ ಹರಿಯುವ ಹಾಗೆ ಮಾಡಲಿಲ್ಲವೆಂದರೆ, ಅದು ಕೊಚ್ಚಿಕೊಂಡು ಹೋಗುತ್ತದೆ. ಇದರಿಂದ ಪ್ರಾಣಹಾನಿ ಮತ್ತು ಆಸ್ತಿಹಾನಿಯಾಗುತ್ತದೆ. ಅದಕ್ಕೆ embankment ಹಾಕಿ, ಅದನ್ನು ವ್ಯವಸ್ಥಿತ ರೀತಿಯಲ್ಲಿ ಹರಿಯುವಂತೆ ಮಾಡುವುದು ನಮ್ಮ ಪ್ರತಿಪಕ್ಷದ ಕೆಲಸ. We will do it very happily. ನಾವು ಅತ್ಯಂತ ಸಮರ್ಥವಾಗಿ ಆ ಕಾರ್ಯವನ್ನು ನಿರ್ವಹಿಸುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ತಮ್ಮ ಅವಧಿಯಲ್ಲಿ ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಾಗಬೇಕು. ಇಡೀ ರಾಷ್ಟ್ರದಲ್ಲಿ ಒಳ್ಳೆಯ ಅಭಿವೃದ್ಧಿ ಕೆಲಸಕ್ಕೆ ಕರ್ನಾಟಕ ನಂಬರ್ ಒನ್ ಎನ್ನುವಂತೆ ತಾವು ಕೆಲಸ ಮಾಡಬೇಕು. ಈಗಾಗಲೇ ತಮಗೆ ಹೇಳಿದ ಹಾಗೆ ಸ್ವಲ್ಪ ತಮ್ಮ ಅಕ್ಕಪಕ್ಕದವರ ಬಗ್ಗೆ ಹುಷಾರಿನಿಂದ ಇರಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಏನು ಹಣಕಾಸಿನ ವಿಧೇಯಕವನ್ನು ಮಂಡಿಸಿದ್ದೀರಿ, ಇದು ನಮ್ಮದೇ ಕೂಸು. ಇದರಲ್ಲಿ ತಾವು ಏನೂ ಬದಲಾವಣೆ ಮಾಡಿಲ್ಲ. ಇದರಲ್ಲಿ full stop, comma ಯಾವುದನ್ನು ಸಹ ಬದಲಾವಣೆ ಮಾಡಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ, ಹಿಂದಿನ ದೋಸ್ತಿ ಸರ್ಕಾರದಲ್ಲಿ ಏಪ್ರಿಲ್ 1ರಿಂದ ಜುಲೈ 31ರವರೆಗೆ ನಾವು ನಾಲ್ಕು ತಿಂಗಳ ಲೇಖಾನುದಾನವನ್ನು ಪಡೆದಿದ್ದೆವು. ತಾವು ಉಳಿದ ಅವಧಿಗೆ ಸಂಪೂರ್ಣವಾಗಿ ಲೇಖಾನುದಾನವನ್ನು ಪಡೆದುಕೊಳ್ಳಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ನಿಮಗೆ ಕಾನೂನಿನಲ್ಲಿ ತೊಡಕಿಲ್ಲ. ನೀವು ಮೂರು ತಿಂಗಳಿಗೆ, ನಾಲ್ಕು ತಿಂಗಳಿಗೆ ಅಥವಾ ಸಂಪೂರ್ಣ ಅವಧಿಗೂ ಸಹ ತೆಗೆದುಕೊಳ್ಳಬಹುದು. ಇವತ್ತು ಯಾರೂ ನಿಮಗೆ ಈ ಹಣಕಾಸಿನ ವಿಧೇಯಕದ ಬಗ್ಗೆ, ಅದರಲ್ಲೂ ವಿಶೇಷವಾಗಿ ನಮ್ಮ ಪಕ್ಷದವರು ವಿರೋಧ ಮಾಡುವುದಿಲ್ಲ. ನಮ್ಮ ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ಪಕ್ಷ. ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಂತಹ ಪಕ್ಷ ಕಾಂಗ್ರೆಸ್ ಪಕ್ಷವಾಗಿದೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತಂದು, ಏಳು ದಶಕಗಳ ಕಾಲ ಪ್ರಜಾಪ್ರಭುತ್ವ ಅವ್ಯಾಹತವಾಗಿ ನಡೆಯಲು ಮತ್ತು ಈ ಪ್ರಜಾಪ್ರಭುತ್ವದ ರಥ ಸಾಂಗವಾಗಿ ನಡೆಯುವುದಕ್ಕೆ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರ ನೀಡಿರುವಂತಹ ಪಕ್ಷ ನಮ್ಮದು. ಈ ಹಣಕಾಸು ವಿಧೇಯಕವನ್ನು we will fully support. ಈ ಸದನದಲ್ಲಿ ನಮ್ಮದು ದೈತ್ಯ majority ಇದೆ. ಈ ಸದನದಲ್ಲಿ ನಾವು ಸುಮಾರು 55 ಸದಸ್ಯರು ಇದ್ದೇವೆ. ಈಗ ಶ್ರೀ ಹೊರಟ್ಟಿಯವರು ಮತ್ತು ನಾವು ಎಲ್ಲರನ್ನು ಕೂಡಿಸಿದರೆ we are 55 in number. Am I right? ನಾವು ದೈತ್ಯ majority, gigantic majority ಇದ್ದಂತೆ ಎಂದು, ನಾವು ಅದನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲ. ಏಕೆಂದರೆ, ನಮಗೆ ಒಂದು ಹಿನ್ನೆಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹಿರಿತನದಲ್ಲಿ ಇಡೀ ದೇಶವನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟಿ, ಈ ದೇಶಕ್ಕೆ ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂತಹ ಬ್ರಿಟಿಷರನ್ನು ಹೊರಗೆ ಓಡಿಸಿ, ಇವತ್ತು ಭಾರತಾಂಬೆಯನ್ನು ದಾಸ್ಯ ಸಂಕೋಲೆಗಳಿಂದ ಮುಕ್ತಗೊಳಿಸಿದಂತಹ ಕೀರ್ತಿಗೆ ಭಾಜನರಾದಂತಹವರು ಕಾಂಗ್ರೆಸ್ ಪಕ್ಷ. ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತಂದು, ಸುಮಾರು 70 ವರ್ಷಗಳ ಕಾಲ ಸಾಂಗವಾಗಿ ನಡೆಯುವಂತಹ ವ್ಯವಸ್ಥೆ ಮಾಡಿ, ಪ್ರಜಾಪ್ರಭುತ್ವಕ್ಕೆ ಧಕ್ಕೆ ಆಗಲಾರದ ಹಾಗೆ ನೋಡಿಕೊಳ್ಳುವಂತಹ ಗುರುತರವಾದಂತಹ ಜವಾಬ್ದಾರಿ ಹೊತ್ತಿರುವಂತಹ ಪಕ್ಷದವರು ನಾವು. ಈ ಹಣಕಾಸಿನ ಮಸೂದೆ ಏನಿದೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ನೀವು ಲೇಖಾನುದಾನವನ್ನು ಕೇವಲ ಮೂರು ತಿಂಗಳಿಗೆ ಮಾತ್ರ ಏಕೆ ತೆಗೆದುಕೊಂಡಿದ್ದೀರಿ ಎಂಬುದಷ್ಟೇ ನಮ್ಮ ಜಿಜ್ಞಾಸೆ. ಅದರ ಬಗ್ಗೆ ತಾವು ಸ್ವಲ್ಪ ಹೇಳಿಕೆ ನೀಡಿದರೆ ಮುಗಿಯುತ್ತದೆ. ಬಹುತೇಕವಾಗಿ ಈ ಕಡೆಯ ಎಲ್ಲಾ ಸದಸ್ಯರು ಈ ಧನ ವಿನಿಯೋಗ ವಿಧೇಯಕಕ್ಕೆ ಬೆಂಬಲ ಸೂಚಿಸಿ ಇದನ್ನು ಸ್ವಾಗತ ಮಾಡಿದ್ದಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದಂತೆ, ಇವತ್ತಿನ ದಿವಸ ನಾನು ಇಡೀ ಸದನದ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಿದ್ದೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಪ್ರತಿಯೊಂದು ವಿಷಯದಲ್ಲೂ ಕೂಡ ನಮ್ಮ ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರು ರಾಜಕೀಯದಲ್ಲಿ ಬಹಳ ಕೆಳಮಟ್ಟದಿಂದ ಮುಖ್ಯಮಂತ್ರಿ ಹುದ್ದೆಯವರೆಗೆ ಬಂದಿದ್ದಾರೆ. ಅವರು ನಾಲ್ಕು ಬಾರಿ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ್ದಾರೆ. ಒಂದು ಬಾರಿ ವಿರೋಧಪಕ್ಷದ ಸ್ಥಾನವನ್ನು ಅಲಂಕರಿಸಿದ್ದಾರೆ ಮತ್ತು ಲೋಕಸಭಾ ಸದಸ್ಯರಾಗಿದ್ದರು. ಅವರು ರಾಜಕೀಯದ ಎಲ್ಲಾ ಅನುಭವಗಳನ್ನು ಹೊಂದಿದ್ದಾರೆ. ಆದ್ದರಿಂದ ನಾವು ಅವರಿಗೇನು ಹೇಳಬೇಕಾಗಿಲ್ಲ. ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಸಲುವಾಗಿ ತಾವೇನು ಕ್ರಮ ಕೈಗೊಂಡು ಕೆಲಸ ಮಾಡುತ್ತೀರಿ ಅವುಗಳೆಲ್ಲದ್ದರ ಬಗ್ಗೆ ವಿರೋಧ ಪಕ್ಷದವರು ಸಹಕಾರ ನೀಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಕಡೆಯಿಂದ ಎಲ್ಲಾ ರೀತಿಯ ಸಹಕಾರವಿದೆ. ಇವತ್ತು ನಾವೆಲ್ಲರೂ ಇಲ್ಲಿಗೆ ಬಂದ ಕೂಡಲೇ ವಿಧಾನ ಪರಿಷತ್ತಿನ ಕಾರ್ಯದರ್ಶಿ ಹಾಗೂ ಮಾನ್ಯ ಸಭಾಪತಿಯವರನ್ನು ಭೇಟಿ ಮಾಡಿ ಈ ಸದನದಲ್ಲಿ ಮಂಡನೆಯಾಗತಕ್ಕಂಥ ಧನ ವಿನಿಯೋಗ ವಿಧೇಯಕವನ್ನು ಯಾವುದೇ ರೀತಿಯಿಂದ ಚರ್ಚೆ ಮಾಡದೆ ಪಾಸ್ ಮಾಡಿಕೊಡುತ್ತೇವೆಂದು ಮಾತನಾಡಿದೆವು. ಆಡಳಿತ ಪಕ್ಷದವರು ಮಾಡತಕ್ಕಂಥ ಎಲ್ಲಾ ಒಳ್ಳೆಯ ಕೆಲಸಗಳಿಗೆ ವಿರೋಧಪಕ್ಷದಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪೂರ್ಣ ಸಹಕಾರ ಮತ್ತು ಬೆಂಬಲವಿದೆ. ಒಮ್ಮೊಮ್ಮೆ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ನಮ್ಮ ಕರ್ತವ್ಯಗಳನ್ನು ಮಾಡುತ್ತಿರುತ್ತೇವೆ. ನಾವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಸರ್ಕಾರದಿಂದ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೆ ತಂದಾಗ, ಅದರಲ್ಲಿ ಲೋಪದೋಷಗಳೇನಾದರೂ ಇದ್ದಲ್ಲಿ, ಅವುಗಳನ್ನೆಲ್ಲಾ ಸದನದ ಗಮನಕ್ಕೆ ತರತಕ್ಕಂಥದ್ದು ನಮ್ಮ ಕರ್ತವ್ಯ. ಆ ಕೆಲಸವನ್ನು ನಾವು ಮಾಡುತ್ತಿರುತ್ತೇವೆ. ನಾವು ಕೊಟ್ಟಂತಹ ಸಲಹೆ ಮತ್ತು ಸೂಚನೆಗಳಿಗೂ ಕೂಡ ತಾವು ಮಾನ್ಯತೆ ಕೊಡುತ್ತೀರಿ ಎನ್ನತಕ್ಕಂಥ ಭರವಸೆ ನಮಗಿದೆ. ಆದರೂ ಈ ರಾಜ್ಯದ ಮುಖ್ಯಮಂತ್ರಿಯಾದವರನ್ನು ನಾನು ಬಹಳ ಮಂದಿ ನೋಡಿದ್ದೇನೆ. ನೀವು ಸೇರಿದಂತೆ ಒಟ್ಟು 17 ಜನ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ತಮ್ಮನ್ನು ನಾಲ್ಕನೇ ಬಾರಿಗೆ ನೋಡುತ್ತಿದ್ದೇನೆ. ಮುಖ್ಯಮಂತ್ರಿ ಸ್ಥಾನದಲ್ಲಿ ಇರತಕ್ಕಂಥವರಿಗೆ ಒತ್ತಡಗಳು ಮತ್ತು ತೊಂದರೆಗಳು ಬರುತ್ತವೆ. ತಾವು ಇದನ್ನೆಲ್ಲಾ ಎದುರಿಸಬೇಕಾಗುತ್ತದೆ. ಸಾಮಾನ್ಯವಾಗಿ ಶಾಸಕರುಗಳಿಗೆ ಹಾಗೂ ಸಚಿವರುಗಳಿಗೇ ಒತ್ತಡ ಮತ್ತು ತೊಂದರೆಗಳು ಬರುತ್ತವೆ. ಇನ್ನು ಇಡೀ ರಾಜ್ಯದ ಜವಾಬ್ದಾರಿಯನ್ನು ನಿಭಾಯಿಸಬೇಕಾದಂತಹ ಒಬ್ಬ ಮುಖ್ಯಮಂತ್ರಿಯಾದವರಿಗೆ ಅದು ಬರುವುದಿಲ್ಲವೆ? ಎಷ್ಟೋ ಬಾರಿ ರಾಷ್ಟ್ರದ ಕಾರ್ಯಕ್ರಮಗಳಲ್ಲಿ ಕೂಡ ಭಾಗವಹಿಸಬೇಕಾಗುತ್ತದೆ. ಆ ರೀತಿ ಇರುವಾಗ ಆಡಳಿತ ಪಕ್ಷದಲ್ಲಿರತಕ್ಕಂಥವರಿಗೆ ನಾನು ಹೇಳುವುದಿಷ್ಟೇ, ನೀವು ಅವರ temper ಅನ್ನು ಕಳೆಯಬೇಡಿ. ಏಕೆಂದರೆ, ಆ ರೀತಿ ಒಂದೊಂದು ಬಾರಿ ಆಗುತ್ತದೆ. ಅದಕ್ಕಾಗಿ ಒಂದು ಉತ್ತಮ, ಸುಭದ್ರವಾದ ಸರ್ಕಾರವನ್ನು ಕೊಡುವಂತಹ ಕೆಲಸವನ್ನು ನೀವು ಮಾಡಿ. ನಿಮಗೆ ದೇವರು ಎಲ್ಲಾ ರೀತಿಯಿಂದಲೂ ಒಳ್ಳೆಯ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ. ಈ ರಾಜ್ಯವನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಿ. ವಿರೋಧ ಪಕ್ಷ ಅಥವಾ ಆಡಳಿತ ಪಕ್ಷ ಎಂದು ಪಕ್ಷಪಾತಗಳು ಇರಬಾರದು. ಈ ರಾಜ್ಯದ ಅಭಿವೃದ್ಧಿಗೆ ನಾವೆಲ್ಲರೂ ಒಟ್ಟಾಗಿ ತಮಗೆ ಸಹಕಾರ ಕೊಡುತ್ತೇವೆ. ನಿಮಗೆ ಯಾವುದೇ ರೀತಿಯಿಂದ ಸಮಸ್ಯೆಗಳಾಗದಂತೆ ಪ್ರಾಮಾಣಿಕವಾದಂತಹ ರೀತಿಯಲ್ಲಿ ನಮ್ಮ ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತೇವೆ. ದೇವರು ನಿಮಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ. ಈ ರಾಜ್ಯದ ಆಡಳಿತವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದು ಹೇಳಿ ತಮ್ಮಲ್ಲಿ ಪ್ರಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ನಾವು ಧನವಿನಿಯೋಗದ ಮಸೂದೆಯನ್ನು ಸರ್ವಾನುಮತದಿಂದ ಅನುಮೋದನೆ ಮಾಡಲು ಒಪ್ಪಿಗೆ ಕೊಡುತ್ತೇವೆ.

**ಶ್ರೀ ತಿಪ್ಪಣ್ಣ ಕಮಕನೂರ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿ ಧನವಿನಿಯೋಗ ಮಸೂದೆಯನ್ನು ಸದನದಲ್ಲಿ ಮಂಡನೆ ಮಾಡಿದ್ದಾರೆ. ಈ ನಾಡಿನ ಜನತೆಯ ವತಿಯಿಂದ, ಹೈದ್ರಾಬಾದ್

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಭಾಗದ ವತಿಯಿಂದ ಮತ್ತು ಹಿಂದುಳಿದ ವರ್ಗಗಳ ವತಿಯಿಂದ ನಾನು ಅವರಿಗೆ ಹಾರ್ಧಿಕವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಎಷ್ಟು ಮಂದಿ ಈ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ ಹಾಗೂ ಎಷ್ಟು ಮಂದಿ ಮುಖ್ಯಮಂತ್ರಿಯಾಗಿ ಹೋಗುತ್ತಾರೆ ಎಂಬುದು ಮುಖ್ಯವಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ ತಾವು ಏನು ಕೆಲಸ ಮಾಡುತ್ತೀರಿ ಎಂಬುದು ಇತಿಹಾಸದ ಪುಟದಲ್ಲಿ ದಾಖಲಾಗುತ್ತದೆ.

(104)29.07.2019 ಎಲ್‌ಎಲ್-ಎಕೆ 4.00

ಶ್ರೀ ತಿಪ್ಪಣ್ಣ ಕಮಕನೂರ(ಮುಂದುವರೆದಿದ್ದು...)

ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಈ ವರ್ಷ ಕೂಡ ಮಳೆಯಾಗದೇ ಯಾವುದೇ ಬೆಳೆಯಾಗದೇ ಬರಗಾಲ ಬಂದಿದೆ. ಜನ ಬೇರೆ ಬೇರೆ ಭಾಗಗಳಿಗೆ ಗುಳೆ ಹೋಗುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಬಡವರ ಕಣ್ಣೀರು ಹೊರೆಸುವಂತಹ ಕೆಲಸವನ್ನು ಮೊದಲು ಮಾಡಿದ್ದಾರೆ, ಮುಂದೆಯೂ ಮಾಡುತ್ತಾರೆಂಬ ನಂಬಿಕೆ ಜನರಿಗಿದೆ. ನಮ್ಮ ಭಾಗದ ಜನರು ಬಹಳಷ್ಟು ಆಸೆ-ಆಕಾಂಕ್ಷಿಗಳನ್ನು ತಮ್ಮ ಮೇಲೆ ಇಟ್ಟುಕೊಂಡಿದ್ದಾರೆ. ಅಲ್ಲದೇ, ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಕೆಳ ಸಮುದಾಯದಲ್ಲಿದ್ದಂತಹ 'ಕೋಲಿ ಸಮಾಜ'ವನ್ನು ಪರಿಶಿಷ್ಟ ಪಂಗಡದಲ್ಲಿ ಸೇರ್ಪಡೆ ಮಾಡಬೇಕೆಂಬ ಬೇಡಿಕೆ ಬಹುದಿನಗಳಿಂದ ಇರುವುದರಿಂದ ಅದನ್ನು ಕೂಡ ತಾವು ಪ್ರಾಮಾಣಿಕವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ನಮ್ಮ ಸಮಾಜಕ್ಕೆ ನ್ಯಾಯ ಕೊಡಿಸುವಂತಹ ಕೆಲಸವನ್ನು ಮಾಡಬೇಕು. ಹೈದರಾಬಾದ್-ಕರ್ನಾಟಕ ಭಾಗಕ್ಕೆ ಈ ವರ್ಷ ಆಯವ್ಯಯದಲ್ಲಿ ಒದಗಿಸಿರುವ ಹಣದ ಜೊತೆಗೆ ಇನ್ನೂ ಸಾವಿರ ಕೋಟಿ ರೂಪಾಯಿ ಹೆಚ್ಚಿಗೆ ಅನುದಾನ ಕೊಟ್ಟು, ನಮ್ಮ ಭಾಗದಲ್ಲಿ ಅಭಿವೃದ್ಧಿಯ ಕೆಲಸವನ್ನು ಮಾಡಿ, ಹಿಂದುಳಿದ ಜನಾಂಗದ ಬೆನ್ನೆಲುಬು ಆಗಿ, ನಮ್ಮ ಕಣ್ಣೀರು ಹೊರೆಸುವಂತಹ ಕೆಲಸವನ್ನು ಮಾಡಬೇಕೆಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಶ್ರೀ ಎಸ್.ಆರ್. ಪಾಟೀಲ್‌ರವರು, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಶ್ರೀ ಸಿ.ಎಂ. ಇಬ್ರಾಹಿಂರವರು ಮತ್ತು ಶ್ರೀ ತಿಪ್ಪಣ್ಣ ಕಮಕನೂರರವರು ಮಾತನಾಡಿದ್ದಾರೆ. ಉಳಿದೆಲ್ಲಾ ಹಿರಿಯ ಸದಸ್ಯರುಗಳು ಈ ಸದನದಲ್ಲಿ ಇದ್ದಾರೆ. ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿ ಮತ್ತು ಹೈದರಾಬಾದ್-ಕರ್ನಾಟಕ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ಕೊಡಬೇಕೆನ್ನುವುದು ತಮ್ಮೆಲ್ಲರ ಅಪೇಕ್ಷೆ. ಇವತ್ತಿನ ದಿವಸ ಆ ಭಾಗದಲ್ಲಿ ಬರಗಾಲದಿಂದ ಮತ್ತು ಇನ್ನಿತರ ಅನೇಕ ಸಂಕಷ್ಟಗಳಿಗೆ ಜನ ಸಿಕ್ಕಿರುವಂತಹ ಈ ಸಂದರ್ಭದಲ್ಲಿ ನಾನೂ ಕೂಡ ಆ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಏನೇನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಸಾಧ್ಯವಿದೆಯೋ ಎಲ್ಲದರ ಬಗ್ಗೆ ತಮ್ಮೆಲ್ಲರ ಜೊತೆ ಚರ್ಚೆ ಮಾಡಿ, ತಮ್ಮೆಲ್ಲರ ಸಹಕಾರ ತೆಗೆದುಕೊಂಡು ಅದನ್ನು ಮಾಡುವವನಿದ್ದೇನೆ.

ಬಹಳ ಪ್ರಮುಖವಾಗಿ ಮಾನ್ಯ ಎಸ್.ಆರ್. ಪಾಟೀಲ್‌ರವರು ಹೇಳಿದ ಹಾಗೆ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಯಾಕೋ ಏನೋ ಮಂದಗತಿಯಿಂದ ನಮ್ಮ ನಿರೀಕ್ಷೆಯಂತೆ ಅದಕ್ಕೆ ಸಾಕಷ್ಟು ಹಣ ಕೊಡುವುದಕ್ಕಾಗಲಿಲ್ಲ. ಒಂದು ಲಕ್ಷ ಕೋಟಿ ರೂಪಾಯಿಗಳಾದರೂ ಆ ಯೋಜನೆಗೆ ಹಣ ಬೇಕಾಗುತ್ತದೆ. ಪ್ರಸ್ತುತ ಇರುವ ಅಣೆಕಟ್ಟನ್ನು 519.60 ಮೀಟರ್‌ನಿಂದ 524.256 ಮೀಟರ್‌ಗಳಿಗೆ ಏರಿಕೆ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದಂತೆ 14 ಲಕ್ಷ ಎಕರೆಗೆ ನೀರಾವರಿ ಆಗುವಂತಹ ಯೋಜನೆ ಇದಾಗಿದೆ. ಆದುದರಿಂದ, ನಾನು ಈ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಮಾತನಾಡುತ್ತೇನೆ. ಈಗ ಪೂರಕ ಬಜೆಟ್‌ನಲ್ಲಿ ಈ ರೀತಿಯ ಯೋಜನೆಗಳಿಗೆ ಹಣವನ್ನು ನೀಡುವುದಕ್ಕೆ ಆಸ್ಪದವಿಲ್ಲ. ಹಿಂದಿನ ಸರ್ಕಾರ ಯಾವ ಬಜೆಟ್ ಅನ್ನು ಮಂಡನೆ ಮಾಡಿತ್ತೋ, ಅದರ ಬಗ್ಗೆ ಮಾತ್ರ ಪೂರಕ ಬಜೆಟ್‌ನಲ್ಲಿ ನಾನು ಕೆಲವುಗಳನ್ನು ಪ್ರಸ್ತಾಪ ಮಾಡಿದ್ದೇನೆ. 3 ತಿಂಗಳಿಗೆ ಲೇಖಾನುದಾನ ತೆಗೆದುಕೊಂಡ ಉದ್ದೇಶವೇ ಇದಾಗಿದೆ. ಬರುವಂತಹ ದಿವಸಗಳಲ್ಲಿ ಹೆಚ್ಚುವರಿ ಹಣವನ್ನು ಕೇಂದ್ರದಿಂದ ತರುವಂತಹ ಪ್ರಯತ್ನ ಮಾಡುತ್ತೇನೆ. ಅಲ್ಲದೇ, ಕೃಷ್ಣಾ ಮೇಲ್ದಂಡೆ ಯೋಜನೆ ಇರಬಹುದು, ಕಳಸಾ ಬಂಡೂರಿ ಯೋಜನೆ ಇರಬಹುದು ಅಥವಾ ಮಹದಾಯಿ ಯೋಜನೆ ಬಗ್ಗೆ ಇರಬಹುದು, ನನ್ನ ಮೊದಲ ಆದ್ಯತೆ ನೀರಾವರಿಯಾಗಿದೆ. ಬಹುಶಃ ನಾವು ರೈತನ ಸಂಕಷ್ಟಗಳಿಗೆ ಸ್ಪಂದಿಸದೇ, ಜಲಾಶಯಗಳಿಂದ ಕೆರೆ-ಕಟ್ಟೆಗಳನ್ನು ತುಂಬಿಸಿ, ರೈತನ ಹೊಲಕ್ಕೆ ನೀರನ್ನು ಕೊಟ್ಟು, ರೈತ ಬೆಳೆದಂತಹ ಬೆಳೆಗಳಿಗೆ ವೈಜ್ಞಾನಿಕವಾದ ಬೆಲೆ ಕೊಡದೇ ಇದ್ದರೆ, ಇನ್ನು ಮುಂದೆ ಯಾವ ರೈತರೂ ಕೂಡ ಕೃಷಿ ಮಾಡುವುದಕ್ಕೆ ಮುಂದೆ ಬರುವುದಕ್ಕೆ ಆಗದೇ ಉಸಿರು ಕಟ್ಟುವಂತಹ ಪರಿಸ್ಥಿತಿ ಇದೆ.

ಇವೊತ್ತಿನ ದಿವಸ ಸುಮಾರು 75-80 ತಾಲ್ಲೂಕುಗಳಲ್ಲಿ ಈಗಲೂ ಸಹ ಮಳೆಯಾಗದೇ, ಬಿತ್ತನೆಯಾಗದೇ ಸಂಕಷ್ಟದಲ್ಲಿರುವಂಥದ್ದು ಹಾಗೂ ಬಿತ್ತನೆ ಮಾಡಿದಂತಹ ಬೆಳೆ ಕೂಡ ಒಣಗಿ ಹೋಗುವಂತಹ ದಾರುಣ ಪರಿಸ್ಥಿತಿ ಇದೆ. ಹೀಗಾಗಿ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಅದಕ್ಕೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನ ಬಂದಾಗ ಆ ಎಲ್ಲಾ ಹಣವನ್ನು ಹೈದರಾಬಾದ್-ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ, ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಮೀಸಲಿಡುತ್ತೇನೆ ಹಾಗೂ ಅದಕ್ಕೆ ಹೆಚ್ಚು ಒತ್ತನ್ನು ಕೊಡುತ್ತೇನೆಂಬ ಭರವಸೆಯನ್ನು ನಾನು ಸಂದರ್ಭದಲ್ಲಿ ಕೊಡುತ್ತಿದ್ದೇನೆ. ಮುಂದಿನ ತಿಂಗಳು 2ನೇ ತಾರೀಖಿನಂದು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ಕರೆದಿದ್ದೇನೆ. ಆ ಸಭೆಯಲ್ಲಿ ಇಡೀ ರಾಜ್ಯದ ವಾಸ್ತವಿಕ ಸ್ಥಿತಿ ಏನು, ಅಧಿಕಾರಿಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನು ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ಚರ್ಚೆ ಮಾಡಿ, ಆ ಸಮಸ್ಯೆಗಳಿಗೆ ಏನಾದರೂ ಪರಿಹಾರ ಹುಡುಕುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಉದ್ದೇಶವನ್ನಿಟ್ಟುಕೊಂಡಿದ್ದೇನೆ.

ಇವೊತ್ತಿನ ದಿವಸ ಸೀಮಿತ ಹಣಕಾಸಿನ ಇತಿ–ಮಿತಿಯಲ್ಲಿ ಈ ವರ್ಷದ ಮಾರ್ಚ್‌ವರೆಗೆ ನಾವು ಕೆಲಸ ಮಾಡುವಂತಹ ಪರಿಸ್ಥಿತಿ ಇದೆ. ದೇವರ ದಯೆಯಿಂದ ಕೇಂದ್ರದಲ್ಲಿ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರಮೋದಿಯವರ ಸರ್ಕಾರ ಇರುವುದು ಮತ್ತು ಇಲ್ಲಿ ನಮ್ಮ ಸರ್ಕಾರ ಇರುವುದು. ಇದೇ ಮೊದಲ ಬಾರಿ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಸರ್ಕಾರ ಅಧಿಕಾರದಲ್ಲಿರುವುದರಿಂದ, ತಮ್ಮೆಲ್ಲರನ್ನೂ ಒಳಗೊಂಡು ಒಂದು ನಿಯೋಗವನ್ನು ಕೇಂದ್ರಕ್ಕೆ ಕರೆದುಕೊಂಡು ಹೋಗಿ, ರಾಜ್ಯಕ್ಕೆ ಹೆಚ್ಚುವರಿ ಹಣವನ್ನು ತರುವಂತಹ ಪ್ರಯತ್ನ ಮತ್ತು ಬಾಕಿ ಉಳಿದಿರುವ ಯೋಜನೆಗಳಿಗೆ ಕ್ಲಿಯರೆನ್ಸ್ ತೆಗೆದುಕೊಂಡು ಬರುವುದಕ್ಕೆ ವಿಶೇಷವಾದ ಒತ್ತನ್ನು ಕೊಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಇದಕ್ಕೆ ಪ್ರಾಮಾಣಿಕವಾಗಿ ಹೆಚ್ಚು ಸಮಯವನ್ನು ಕೊಟ್ಟು, ತಮ್ಮೆಲ್ಲರ ನಿರೀಕ್ಷೆಗಿಂತಲೂ ಇದರಲ್ಲಿ ನಾಡಿನ ಆರೂವರೆ ಕೋಟಿ ಜನರ ಅಪೇಕ್ಷೆ ತುಂಬಾ ಇದೆ. ಆ ಪಕ್ಷ ಈ ಪಕ್ಷ ಎನ್ನುವ ಪ್ರಶ್ನೆ ಇರುವುದಿಲ್ಲ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಹಿಂದಿನ ಸರ್ಕಾರದ ಆಡಳಿತಾವಧಿಯಲ್ಲಿ ಏನೇನು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿತ್ತು, ಆ ಕೆಲಸವನ್ನು ಮಾಡಿದ್ದಾರೆ. ಶ್ರೀ ಸಿದ್ದರಾಮಯ್ಯ ಹಾಗೂ ಶ್ರೀ ಎಚ್.ಡಿ. ಕುಮಾರಸ್ವಾಮಿಯವರಿಗೂ ಸಹ ನಾನು ಅದನ್ನೇ ಹೇಳಿದ್ದೇನೆ. ನಾನು ಸೇಡಿನ ರಾಜಕಾರಣ ಮಾಡುವ ಪ್ರಶ್ನೆ ಇರುವುದಿಲ್ಲ. ಎಲ್ಲರೂ ಒಟ್ಟಾಗಿ ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಕೆಲಸ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಈ ಬಗ್ಗೆ ಕೆಳಮನೆಯಲ್ಲಿಯೂ ಸಹ ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಈ ಸದನದಲ್ಲಿಯೂ ಸಹ ನಾನು ಅದೇ ವಿನಂತಿಯನ್ನು ಮಾಡುತ್ತೇನೆ. ನಾನು ಈ ಮನೆಯಲ್ಲಿಯೂ ಸದಸ್ಯನಾಗಿ ಕೆಲಸ ಮಾಡಿದಂತಹ ಅನುಭವ ಇದ್ದು, ಇವೊತ್ತಿನ ದಿವಸ ತಮ್ಮೆಲ್ಲರ ಜೊತೆಯಲ್ಲಿ ಕೆಲಸ ಮಾಡುವಂತಹ ಅವಕಾಶ ಸಿಕ್ಕಿದೆ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುವುದೇನೆಂದರೆ, ತಾವೆಲ್ಲರೂ ಯಾವ ಅಪೇಕ್ಷೆಗಳನ್ನು ವ್ಯಕ್ತಪಡಿಸಿದ್ದೀರಿ, ಅವುಗಳ ಬಗ್ಗೆ ಬರುವಂತಹ ದಿವಸಗಳಲ್ಲಿ ಬಹಳ ಸುದೀರ್ಘವಾದ ಚರ್ಚೆಗಳನ್ನು ಮಾಡಬೇಕಾಗಿದೆ. ಆ ಚರ್ಚೆಯ ಆಧಾರದ ಮೇರೆಗೆ ಮುಂದೆ ಏನೇನು ಕಾರ್ಯಕ್ರಮ ರೂಪಿಸಬೇಕಾಗಿದೆಯೋ, ಅದನ್ನು ಹಣಕಾಸಿನ ಇತಿ–ಮಿತಿಯೊಳಗೆ ಮಾಡುವುದಕ್ಕೆ ನಾನು ಸಂಪೂರ್ಣವಾಗಿ ಸಿದ್ದನಿದ್ದೇನೆ. ನನ್ನ ಆದ್ಯತೆ ನೀರಾವರಿ ಯೋಜನೆ, ನನ್ನ ಆದ್ಯತೆ ಕೃಷ್ಣಾ ಬೇಸಿನ್‌ನಲ್ಲಿ ಹೆಚ್ಚು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ವಿಶೇಷವಾಗಿ ತಮ್ಮದೇ ಸರ್ಕಾರ ಇರುವುದರಿಂದ, ಈ ಕೃಷ್ಣೆಯಂತಹ ಬೃಹತ್ ಯೋಜನೆಗೆ ಹಣ ತರುತ್ತೇನೆಂದು ಹೇಳಿರುವುದಕ್ಕೆ, ನಾನು ತಮ್ಮನ್ನು ಅಭಿನಂದಿಸುತ್ತೇನೆ. You beg, borrow or steal but you should complete the Upper Krishna Project. It's my humble request.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಮೊದಲನೇ ಕೆಲಸವೇ ಅದು. ಇನ್ನೊಂದು ವಾರದಲ್ಲಿ ಅಂದರೆ, 3-4 ದಿವಸ ಬಿಟ್ಟು, ಮಾನ್ಯ ಪ್ರಧಾನಿಯವರನ್ನು ಭೇಟಿ ಮಾಡುತ್ತೇನೆ. ನೀರಾವರಿಗೆ ಆದ್ಯತೆ ಕೊಡಬೇಕೆಂದು ಕೇಂದ್ರದಲ್ಲಿ ನೀರಾವರಿ ಇಲಾಖೆಗೆ ಒಬ್ಬರು 'ಜಲಶಕ್ತಿ ಸಚಿವ'ರನ್ನು ಮಾಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಹೀಗಾಗಿ, ಅದಕ್ಕೆ ಹೆಚ್ಚು ಒತ್ತನ್ನು ಕೊಟ್ಟು, ಆದಷ್ಟು ಬೇಗ ಹೆಚ್ಚುವರಿ ಹಣವನ್ನು ಕೇಂದ್ರದಲ್ಲಿ ಕೊಟ್ಟರೆ, ಈ ವರ್ಷದಲ್ಲಿಯೇ ಕೆಲವು ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಕೃಷ್ಣಾ ಬೇಸಿನ್‌ನಲ್ಲಿ ಹೆಚ್ಚುವರಿ ಕೆಲಸ ಮಾಡಬೇಕಾದರೆ, ಅಲ್ಲಿರುವಂತಹ ಗ್ರಾಮಗಳ ಸ್ಥಳಾಂತರ ಮತ್ತು ಅವರಿಗೆ ಪುನರ್ವಸತಿ ಮಾಡುವಂಥದ್ದನ್ನು ತಕ್ಷಣವೇ ಮಾಡಬೇಕಾಗಿದೆ. ಈ ಬಗ್ಗೆ ಹೆಚ್ಚು ಒತ್ತು ಕೊಡಬೇಕೆಂದು ಯೋಚನೆ ಮಾಡಿದ್ದೇನೆ. ಇದಕ್ಕೆ ತಾವೆಲ್ಲರೂ ಸಹಕಾರ ನೀಡಿದರೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ಚರ್ಚೆ ಮಾಡೋಣ, ಅದಕ್ಕೆ ತಾವೆಲ್ಲರೂ ಸಹಕಾರ ಮಾಡಬೇಕೆಂದು ವಿನಂತಿಸಿ, ದಯಮಾಡಿ ಈ ಲೇಖಾನುದಾನಕ್ಕೆ ಅನುಮತಿಯನ್ನು ಕೊಡಬೇಕೆಂದು ಮತ್ತೊಮ್ಮೆ ಸಭಾಪತಿಯವರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ,

**ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ: 2) ವಿಧೇಯಕ, 2019** ಅನ್ನು ಪರ್ಯಾಲೋಚಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

**<u>ಖಂಡ 2 ಮತ್ತು 3</u>**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ
ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ
ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ,
**ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ: 2) ವಿಧೇಯಕ, 2019** ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ,

**ಕರ್ನಾಟಕ ಧನವಿನಿಯೋಗ (ಲೇಖಾನುದಾನ ಸಂಖ್ಯೆ: 2) ವಿಧೇಯಕ, 2019** ಅನ್ನು

ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(105) 29.07.2019 4.10 ವೈಎಲ್-ಆರ್‌ಎನ್

## ಆ) ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕ, 2019

### *ಪರ್ಯಾಲೋಚನಾ ಪ್ರಸ್ತಾವ*

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಚರ್ಚೆ ಮಾಡಿ, ನಂತರ ಅಂಗೀಕರಿಸುವುದು ಒಳ್ಳೆಯದು. ಈಗಾಗಲೇ ಈ ವಿಧೇಯಕವನ್ನು ಕೆಳ ಮನೆಯಲ್ಲಿ ಅಂಗೀಕರಿಸಲಾಗಿದ್ದು, ಚರ್ಚೆಯಾಗಿದೆಯೋ, ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ, ಮೇಲ್ಮನೆ ಸದಸ್ಯರು ಈ ವಿಧೇಯಕದ ಮೇಲೆ ಚರ್ಚೆ ಮಾಡಿ ಅಂಗೀಕರಿಸುವುದು ಒಳ್ಳೆಯದು. ಸದ್ಯಕ್ಕೆ ಕಾರ್ಯಕಲಾಪಗಳನ್ನು ನಡೆಸಲು ಆಗುವುದಿಲ್ಲ. ಜುಲೈ 30 ರವರೆಗೂ ಧನವಿನಿಯೋಗಕ್ಕೆ ಮಂಜೂರಾತಿ ನೀಡಲಾಗಿದೆ. ಆದರೆ, ಪೂರಕ ಬೇಡಿಕೆಗೆ ಅವಕಾಶ ಇರುವುದರಿಂದ ಸದರಿ ವಿಧೇಯಕದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಮುಂದಿನ ದಿನಗಳಲ್ಲಿ ಈ ವಿಧೇಯಕವನ್ನು ತೆಗೆದುಕೊಳ್ಳಬಹುದೆಂದು ಭಾವಿಸುತ್ತೇನೆ; ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಪೂರಕ ಅಂದಾಜನ್ನು ಮಂಡನೆ ಮಾಡುವುದರಿಂದ ನಮಗೂ ಕೂಡ ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲು ಅವಕಾಶವಿದೆ. ಹಾಗಾಗಿ, ಯಾವುದೇ ಚರ್ಚೆ ಮಾಡದೆ, ನೇರವಾಗಿ ವಿಧೇಯಕವನ್ನು ಅಂಗೀಕರಿಸುವುದರಿಂದ, ನಮ್ಮಲ್ಲಿರತಕ್ಕಂಥ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಮತ್ತು ಅದನ್ನು ಸೇರ್ಪಡೆಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ಬಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲವು ಬಾರಿ ನಮ್ಮ ಅನೇಕ ಬೇಡಿಕೆಗಳನ್ನು ಈಡೇರಿಸಲು ಪೂರಕ ಅಂದಾಜಿನಲ್ಲಿ ಅನುದಾನವನ್ನು ಪೂರೈಕೆ ಮಾಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದರು. ಹಾಗಾಗಿ, ಈಗ ಆ ಅವಕಾಶದಿಂದ ವಂಚಿತರಾದರೆ, ಮುಂದೆ ನಮಗೆ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ ದಯವಿಟ್ಟು ಕೆಲವು ಬೇಡಿಕೆಗಳನ್ನು ಪೂರಕ ಅಂದಾಜಿನಲ್ಲಿ ಈಡೇರಿಸಲಿ. ಈಗ ಇರತಕ್ಕಂಥ ಪೂರಕ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದಾಜನ್ನು ಗಮನಿಸಿದ್ದೇನೆ, ಅದರಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಬಗ್ಗೆ ಯಾವುದೇ ಉಲ್ಲೇಖ ಮಾಡಿರುವುದಿಲ್ಲ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಅಸ್ತಿತ್ವದಲ್ಲಿದ್ದಾಗಲೇ ಪೂರಕ ಅಂದಾಜನ್ನು ಮಾಡಲಾಗಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ ಆಗಲಿ. ಆದರೆ, ಕ್ರೈಸ್ತ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಲಾಗಿದ್ದು, ಅದರಲ್ಲಿ ಹಣವಿಲ್ಲ. ಕೇವಲ 200.00 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಈ ಹಿಂದೆ ಇಟ್ಟಿರತಕ್ಕಂಥ ಬೇಡಿಕೆಯನ್ನು ಸಹ ಸೇರಿಸಿ ಅನುದಾನವನ್ನು ಒದಗಿಸಿದರೆ ಒಳ್ಳೆಯದು. ನಮಗೆ ಇನ್ನೂ ಹೆಚ್ಚು ಅನುದಾನ ಬೇಕಾಗಿದೆ. ಹಾಗಾಗಿ ನನ್ನ ಬೇಡಿಕೆಯೇನೆಂದರೆ, ಕ್ರೈಸ್ತ ಧರ್ಮದ ಅಭಿವೃದ್ಧಿಗಾಗಿ ಕೇವಲ 200.00 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಕ್ರೈಸ್ತ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಪೂರಕ ಅಂದಾಜಿನಲ್ಲಿ ಹೆಚ್ಚು ಅನುದಾನ ನೀಡಬೇಕೆಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಪೂರಕ ಅಂದಾಜನ್ನು ತಮ್ಮ ಸರ್ಕಾರ ಅಸ್ತಿತ್ವದಲ್ಲಿದ್ದಾಗಲೇ ಮಾಡಲಾಗಿದೆಯೆಂದು ತಿಳಿಸಿದ್ದಾರೆ. ಆಯಿತು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅನುದಾನ ಒದಗಿಸಿ ಎಂದು ಬೇಡಿಕೆ ಇಡುವುದು ನಮ್ಮ ಕರ್ತವ್ಯ. ಅದನ್ನು ಕೇಳಬೇಡಿ ಎಂದು ಹೇಳಿದರೆ, ನಾವು ಸದನಕ್ಕೆ ಸುಮ್ಮನೆ ಬಂದು ಕುಳಿತುಕೊಂಡು ಹೋಗುವುದಕ್ಕೆ ಬಂದಿದ್ದೇವೆಯೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕ, 2019ನ್ನು ನಾನು ಅತ್ಯಂತ ಪ್ರೀತಿಯಿಂದ ಸ್ವಾಗತಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಈಗ ಧನ ವಿನಿಯೋಗ ಪಾಸ್ ಆಗುತ್ತಿರುವುದು ಕೇವಲ 3 ತಿಂಗಳಿಗೆ ಮಾತ್ರ. ಆದ್ದರಿಂದ ಮುಂದಿನ ದಿನಗಳಲ್ಲಿ ಈ ಬಗ್ಗೆ ಸವಿಸ್ತಾರವಾಗಿ ಮಾತನಾಡುವುದು ಒಳ್ಳೆಯದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು. ತಾವು ಈಗಾಗಲೇ ನನಗೆ ಮಾತನಾಡಲು ಅವಕಾಶ ಕಲ್ಪಿಸಿರುವುದರಿಂದ ನನ್ನ ಮಾತನ್ನು ಮುಂದುವರೆಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಆಯಿತು, ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಹಿರಿಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಉತ್ತರ ಕರ್ನಾಟಕದ ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದಾರೆ. ನಾನು ಹಳೆಯ ಮೈಸೂರಿನ ಭಾಗದಿಂದ ಬಂದಿರತಕ್ಕಂಥವನು. ವಿಶೇಷವಾಗಿ ಇವತ್ತಿನ ಮುಖ್ಯಮಂತ್ರಿಗಳ ಜಿಲ್ಲೆಯಿಂದ ಬಂದಿರತಕ್ಕಂಥವನು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಆಯ್ಕೆಯಾದ ತಕ್ಷಣ ಬೂಕನಕೆರೆಗೆ ಬಂದು ಅವರ ಮನೆ ದೇವರಿಗೆ ಪೂಜೆ ಸಲ್ಲಿಸಿದ್ದಾರೆ. ಹಾಗೆಯೇ ಮಾನ್ಯ ಎಸ್.ಆರ್.ಪಾಟೀಲ್‌ರವರು ಕೃಷ್ಣ ಮೇಲ್ದಂಡೆ ಯೋಜನೆಯ ಜೊತೆಗೆ ಕಾವೇರಿ ಅಣೆಕಟ್ಟಿನ ಬಗ್ಗೆಯೂ ವಿಚಾರ ಮಾಡಿದ್ದಾರೆ. ಇವತ್ತಿನ ದಿನ ಕಾವೇರಿ ನದಿ ನೀರಿನ ವಿಚಾರದಲ್ಲಿ ಎಂದೆಂದಿಗೂ ಇಲ್ಲದಂಥ ದೊಡ್ಡ ಸಮಸ್ಯೆಗಳು, ಸವಾಲುಗಳು ನಮ್ಮ ಮುಂದೆ ಇವೆ. ಈ ಸಮಸ್ಯೆ ಎಲ್ಲಿಯವರೆಗೆ ತಲುಪಿದೆಯೆಂದರೆ, ಕೇಂದ್ರದ ಪ್ರಾಧಿಕಾರವು ಕಾವೇರಿ ಅಣೆಕಟ್ಟನ್ನು ಉಸ್ತುವಾರಿ ಮಾಡುವಂಥ ಸಂದರ್ಭ ಬಂದಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆನ್ನುವ ದಿಸೆಯಿಂದ ಕೇಂದ್ರದ ಸೂಚನೆ ಮೇರೆಗೆ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ DPR (Detailed Project Report) ಕೂಡ ಮಾಡಲಾಗಿದೆ. ಈ ಒಂದು ಯೋಜನೆಗೆ ಮಂಜೂರಾತಿಯನ್ನು ಪಡೆಯಬೇಕಾದಂಥ ದೊಡ್ಡ ಸವಾಲು ನಮ್ಮ ಸರ್ಕಾರದ ಮುಂದೆ ಇದೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಕೇಳಿ–ಕೇಳಿ ಬಿಜೆಪಿ ಸರ್ಕಾರವೇ ಅಸ್ತಿತ್ವದಲ್ಲಿದೆ. ಬಹುಶಃ ಬೆಂಗಳೂರು ಸೇರಿದಂತೆ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ಹಳೆಯ ಮೈಸೂರು ಭಾಗಕ್ಕೂ ಆಶ್ರಯವಾಗಿರತಕ್ಕಂಥದ್ದು ಕಾವೇರಿ ನದಿ ನೀರು ಮಾತ್ರ. ಇವತ್ತಿನ ದಿವಸ ನಮಗೆ ಒಂದು ಕಡೆ ಬೇಸಾಯವೂ ಆಗಬೇಕು, ಮತ್ತೊಂದು ಕಡೆ ಕುಡಿಯುವ ನೀರಿನ ಬವಣೆಯೂ ನೀಗಬೇಕಾಗಿದೆ. ಇವತ್ತಿನ ದಿನ ನೂರಾರು ಟಿಎಂಸಿಗಳಷ್ಟು ನೀರು ಸಮುದ್ರ ಸೇರುತ್ತಿದೆ. ಅದರ ಬದಲಾಗಿ ಇವತ್ತು ಮೇಕೆದಾಟಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿಕೊಳ್ಳುವಂತಹ ಪರ್ಯಾಯ ಯೋಜನೆ ಇದಾಗಿದೆ. ಮೇಕೆದಾಟಿನಿಂದ ನೀರನ್ನು ವಾಪಸ್ಸು ತರುವುದಕ್ಕೆ ಸಾಧ್ಯವಿಲ್ಲ. ಆದರೆ, ತಮಿಳುನಾಡಿಗೆ ಅಗತ್ಯವಿರತಕ್ಕಂಥ ನೀರನ್ನು ಪೂರೈಕೆ ಮಾಡಲು ಸಾಧ್ಯವಿದೆ. ಆ ಕಾರಣಕ್ಕಾಗಿ ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ಒದಗಿಸುವುದರ ಜೊತೆ–ಜೊತೆಗೆ ಈ ಮಹತ್ವದ ಯೋಜನೆಯನ್ನು ಕೈಗೆತ್ತಿಕೊಳ್ಳುವಂತಹ ಜವಾಬ್ದಾರಿಯನ್ನು ನಿಭಾಯಿಸತಕ್ಕಂಥದ್ದು ಬಿಜೆಪಿ ಸರ್ಕಾರದ ಮುಂದಿದೆ ಎನ್ನುವ ಮಾತನ್ನು ನೆನಪಿಸುತ್ತಾ, ಇವತ್ತಿನ ದಿವಸ ವಿಶೇಷವಾಗಿ ನಮ್ಮ ಭಾಗದಲ್ಲಿ ಕಬ್ಬು ಬೆಳೆದು ನಿಂತು, ಕಬ್ಬನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನುರಿಸಬೇಕಾಗಿದ್ದು, ಯಾವುದೇ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಿರುವುದಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಸಹ ಸಭೆ ನಡೆಸಿ, ಕಾರ್ಖಾನೆಗಳನ್ನು ಚಾಲನೆ ಮಾಡಲು ತಿಳಿಸಿದ್ದಾರೆ. ವಿಶೇಷವಾಗಿ ಇಡೀ ಏಷ್ಯಾ ಖಂಡದಲ್ಲಿರತಕ್ಕಂಥ ಒಂದೇ ಸಕ್ಕರೆ ಕಾರ್ಖಾನೆ ಎಂದರೆ, ಅದು ಮೈಸೂರು ಸಕ್ಕರೆ ಕಾರ್ಖಾನೆಯಾಗಿದೆ. ಇವತ್ತು ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲವಿಲ್ಲದ ಪ್ರಯುಕ್ತ ಇನ್ನೂ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿಲ್ಲ. ಇದರಿಂದ ರೈತರು ದಿಕ್ಕೆಟ್ಟು ಹೋಗಿದ್ದಾರೆ. ಒಂದು ಕಡೆ ಮಳೆ ಇಲ್ಲ, ಜೊತೆಗೆ ಈಗಾಗಲೇ ಕಟಾವು ಮಾಡಿರುವ ಕಬ್ಬನ್ನು ನುರಿಸಬೇಕಾಗಿದೆ. ಹಾಗಾಗಿ, ನಮ್ಮ ಭಾಗದ ಎಲ್ಲಾ ಕಾರ್ಖಾನೆಗಳು ತಕ್ಷಣವೇ ಕಾರ್ಯಾರಂಭ ಮಾಡಬೇಕಾಗಿದೆ. ಕಾರ್ಖಾನೆಯನ್ನು ಪ್ರಾರಂಭ ಮಾಡುವುದರ ಮೂಲಕ ಬೆಳೆದು ನಿಂತಿರತಕ್ಕಂಥ ಕಬ್ಬನ್ನು ನುರಿಸುವುದರ ಮೂಲಕ ರೈತರಿಗೆ ಆಶ್ರಯವನ್ನು ನೀಡುವಂಥ ಬಹು ದೊಡ್ಡ ತೀರ್ಮಾನ ಮತ್ತು ಸವಾಲು ಸರ್ಕಾರದ ಮುಂದೆ ಇದೆ. ದಯಮಾಡಿ ಒಂದು ಕಡೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದರ ಜೊತೆಗೆ ಕಾವೇರಿ ಜಲಾನಯನ ಭಾಗದ ಕಟ್ಟಕಡೆಯ ನಾಲೆಗಳೆಲ್ಲಾ ಆಧುನೀಕರಣವಾಗಬೇಕಾಗಿದೆ. ಆಧುನೀಕರಣದ ಮೂಲಕ ಆ ನೀರು ರೈತರಿಗೂ ತಲುಪುವ ಹಾಗೆ ನೋಡಿಕೊಳ್ಳುವಂಥ ದೊಡ್ಡ ಸವಾಲು ಸರ್ಕಾರದ ಮುಂದೆ ಇದೆ. ಈ ಮೂರು ಬೇಡಿಕೆಗಳನ್ನು ಈಡೇರಿಸುವ ದಿಸೆಯಲ್ಲಿ ದೃಢವಾದ ಹೆಜ್ಜೆಯನ್ನು ಮಾನ್ಯ ಮುಖ್ಯಮಂತ್ರಿಗಳು ಇಡಬೇಕು. ಉತ್ತರ ಕರ್ನಾಟಕದ ಜೊತೆ-ಜೊತೆಯಲ್ಲಿ ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಬೇಕೆಂದು ಆಶಿಸುತ್ತಾ, ತಮಗೆ ಅಭಿನಂದನೆಗಳನ್ನು ಸಲ್ಲಿಸುವುದರೊಂದಿಗೆ ಈ ಧನವಿನಿಯೋಗ ವಿಧೇಯಕವನ್ನು ಸ್ವಾಗತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು, ಮಾನ್ಯ ಐವನ್ ಡಿ'ಸೋಜಾರವರು, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಪೂರಕ ಅಂದಾಜನ್ನು ಮೈತ್ರಿ ಸರ್ಕಾರ ಅಸ್ತಿತ್ವದಲ್ಲಿದ್ದಂಥ ಸಂದರ್ಭದಲ್ಲಿಯೇ ಮಾಡಲಾಗಿದ್ದು, ಅದರಲ್ಲಿ ನಾನು ಯಾವುದೇ ರೀತಿಯ ವ್ಯತ್ಯಾಸವನ್ನು ಮಾಡದೇ ಅದನ್ನೇ ಯಥಾವತ್ ಮಂಡನೆ ಮಾಡಿರುತ್ತೇನೆ. ಈ ಪೂರಕ ಅಂದಾಜನ್ನು total budget ನಲ್ಲಿ ಕೂಡಿರತಕ್ಕಂಥದ್ದು. ಇವತ್ತು ಮಾನ್ಯ ಐವನ್ ಡಿ'ಸೋಜಾರವರು ಕ್ರೈಸ್ತ ಮಂಡಳಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಸಿ.ಎಂ.ಇಬ್ರಾಹಿಂರವರಿಗೆ ಮತ್ತು ಮಾನ್ಯ ಐವನ್ ಡಿ'ಸೋಜಾರವರಿಗೆ ಭರವಸೆ ನೀಡುವುದೇನೆಂದರೆ, ಹಿಂದೆಯೂ ಅಷ್ಟೇ, ಇನ್ನು ಮುಂದೆಯೂ ಅಷ್ಟೇ; ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎನ್ನುವಂಥ ಯಾವುದೇ ಬೇಧ-ಭಾವ ಮಾಡದೇ, ಯಾವುದೇ ಸಮಯದಲ್ಲಿಯೂ ಅದರ ಅಭಿವೃದ್ಧಿಗೋಸ್ಕರ, ಸಮಾಜದ ಅಭಿವೃದ್ಧಿಗೋಸ್ಕರ ನಾನು ಅವರ ಜೊತೆಯಲ್ಲಿರುತ್ತೇನೆ. ಇದು ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳಿಂದ ನನ್ನ ಮನಸ್ಸಿನಲ್ಲಿರತಕ್ಕಂಥ ಭಾವನೆಯಾಗಿದೆ. ಅದನ್ನು ಯಾವ ಶಕ್ತಿಯೂ ಸಹ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಕ್ರಿಶ್ಚಿಯನ್ ಸಮುದಾಯ ಇರಬಹುದು, ಮುಸ್ಲಿಂ ಸಮುದಾಯ ಇರಬಹುದು, ಬೇಧ-ಭಾವ ಮಾಡದೇ ಸವಲತ್ತುಗಳನ್ನು ಒದಗಿಸುವ ಜವಾಬ್ದಾರಿ ನನ್ನದು, ಅದನ್ನು ಮಾಡಿಕೊಡುತ್ತೇನೆ. ಎರಡನೆಯದಾಗಿ ಮೇಕೆದಾಟು ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ವಿರೋಧ ಇಲ್ಲ. ಮೇಕೆದಾಟಿನ ಸಮಸ್ಯೆಯನ್ನು ಬಗೆಹರಿಸಲು ಏನು ಹಣಕಾಸಿನ ನೆರವಿನ ಅಗತ್ಯ ಇದೆಯೋ ಅದನ್ನು ಒದಗಿಸಿ, ಆದಷ್ಟು ಬೇಗ ಮೇಕೆದಾಟು ಯೋಜನೆಯ ಕೆಲಸ ಕಾರ್ಯಗಳು ಆಗಬೇಕಾಗಿದೆ. ಹಿಂದೆಯೂ ಸಹ ಎಲ್ಲಾ ಪ್ರಯತ್ನ ಮಾಡಲಾಗಿದೆ. ಮುಂದೆ ಸಹ ಅದಕ್ಕೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಕೆಲಸ ಮಾಡಿ, ಕುಡಿಯುವ ನೀರಿನ ಹಾಹಾಕಾರ ತಪ್ಪಿಸುವುದಕೋಸ್ಕರ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

(105)29.07.2019 ಎಸ್‌ಕೆ-ಆರ್‌ಎನ್ 4.20

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ)(ಮುಂದು):-** ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡುವುದರ ಬಗ್ಗೆ ಈಗಾಗಲೇ ಹೇಳಿದ್ದೀರಿ. ಕೇಂದ್ರ ಸರ್ಕಾರ ಸಹ interest-free loan ಎಂದು ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಇವೆಲ್ಲವನ್ನು ಉಪಯೋಗ ಮಾಡಿಕೊಳ್ಳಬೇಕು. ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರಿಗೆ ನೀಡಬೇಕಾದಂತಹ ಬಾಕಿ ಹಣವನ್ನು ಪಾವತಿ ಮಾಡಬೇಕಾಗಿದೆ. ಅದರ ಸಲುವಾಗಿ ದೊಡ್ಡ ಅಕ್ರೋಶ ಮತ್ತು ಹೋರಾಟ ನಡೆಯುತ್ತಿದೆ. ಈ ಹಿಂದೆ ಇದ್ದಂತಹ ಸರ್ಕಾರವು ಸಹ ಸೂಚನೆಯನ್ನು ಕೊಟ್ಟಿತ್ತು. ಆ ಸಕ್ಕರೆ ಕಾರ್ಖಾನೆಯಲ್ಲಿರುವಂಥದ್ದನ್ನು seize ಮಾಡಿ, ತಕ್ಷಣ ಪೇಮೆಂಟ್ ಆಗಬೇಕು ಎನ್ನುವುದರ ಕಡೆ ಪ್ರಯತ್ನ ಮಾಡಿತ್ತು. ಆ ಪೇಮೆಂಟ್ ಆಗುವುದರ ಕಡೆ ನಾವು ನೋಡಿಕೊಳ್ಳಬೇಕಾಗಿದೆ. ಕಾವೇರಿ ಮತ್ತು ಕೃಷ್ಣಾ ಅಚ್ಚುಕಟ್ಟು ಪ್ರದೇಶಗಳು ಆಧುನೀಕರಣ ಆಗಬೇಕಾಗಿರುವಂಥದ್ದರ ಬಗ್ಗೆ ಎರಡು ಮಾತಿಲ್ಲ. ಆದರೆ ಭಗವಂತನ ದಯೆಯಿಂದ ಕೃಷ್ಣಾ ನದಿಯಲ್ಲಿ ನೀರು ತುಂಬಿ ತುಳುಕುತ್ತಿದೆ. ದೇವರ ದಯೆಯಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಒಳ್ಳೆಯ ಮಳೆ ಆಗಿದ್ದರಿಂದ, ನಮ್ಮ ರಾಜ್ಯಕ್ಕೆ ಒಳ್ಳೆಯ ಅವಕಾಶವಾಗಿದೆ. ನಮ್ಮ ನಿರೀಕ್ಷೆಯಂತೆ ಕೃಷ್ಣಾ, ಕಬಿನಿ ಜಲಾಶಯಗಳ ಭಾಗಕ್ಕೆ ನೀರು ಬಂದಿಲ್ಲ. ಅದರ ಬಗ್ಗೆ ನಮಗೆ ನೋವಿದೆ. ಭಗವಂತನ ದಯೆ ಮತ್ತು ವರುಣದೇವನ ಕೃಪೆಯಿಂದ ನಾಲ್ಕಾರು ದಿನಗಳಲ್ಲಿ ಹೆಚ್ಚು ಮಳೆಯಾಗಿ ಈ ಜಲಾಶಯಗಳು ತುಂಬುತ್ತವೆಂಬ ವಿಶ್ವಾಸವು ನಮ್ಮ ಮಾನ್ಯ ಶ್ರೀಕಂಠೇಗೌಡರಿಗೂ ಮತ್ತು ನಮಗೂ ಇದೆ. ಎಲ್ಲರ ದೃಷ್ಟಿಯಿಂದ ಎಲ್ಲವೂ ಸರಿ ಹೋಗುತ್ತದೆ. ನಾನು ಇಷ್ಟೇ ಭರವಸೆಯನ್ನು ಕೊಡುವಂತಹದ್ದು, ಈ ಹಿಂದೆ ಇದ್ದಂತಹ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಇಂತಿಂಥ ಯೋಜನೆಗಳಿಗೆ ಮಂಜೂರಾತಿಯನ್ನು ಕೇಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಯತ್ನವನ್ನು ಮಾಡಿದ್ದರು. ಅದು ಸಹ ಪೆಂಡಿಂಗ್ ಇದೆ. ಅದನ್ನು ಆದ್ಯತೆಯ ಮೇರೆಗೆ clearance ಮಾಡಿಕೊಂಡು ಬರುವುದರ ಬಗ್ಗೆ ಜವಾಬ್ದಾರಿ ನನ್ನದು. ಕಲ್ಬುರ್ಗಿ ವಿಮಾನ ನಿಲ್ದಾಣವನ್ನು ಪ್ರಧಾನಿಯವರನ್ನು ಕರೆದು, ತಕ್ಷಣ ಅವರಿಂದ ಅದನ್ನು ಉದ್ಘಾಟಿಸಿ ಪ್ರಾರಂಭಿಸಿದರೆ, ಅದರ ಸುತ್ತಮುತ್ತ ಕೈಗಾರಿಕೆಗಳು ಪ್ರಾರಂಭವಾಗುವುದಕ್ಕೆ ಅನುಕೂಲವಾಗುತ್ತದೆ ಎಂಬುದು ನನ್ನ ಮಹದಾಸೆ. ಆದ್ದರಿಂದ ಈ ತರಹ ಏನೇನು ಪೆಂಡಿಂಗ್ ಪ್ರಾಜೆಕ್ಟ್‌ಗಳಿವೆ ಮತ್ತು ಮಂಜೂರಾತಿಯಾಗಿರುವಂತಹ ಪ್ರಾಜೆಕ್ಟ್‌ಗಳು ಕಾರ್ಯರೂಪಕ್ಕೆ ಬರುವಂಥದ್ದಿವೆ ಅದು ರೈಲ್ವೆ ಯೋಜನೆಗಳಿರಬಹುದು, ಬೇರೆ ಯೋಜನೆಗಳಿರಬಹುದು ಅವುಗಳ ಕಡೆ ತ್ವರಿತ ಗಮನಹರಿಸಬೇಕಿದೆ. ತಮಗೂ ಇದು ಗೊತ್ತಿರಬಹುದು, ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಿಸುವ ವಿಚಾರದಲ್ಲಿ ಹಿಂದೆ ಎಂದೂ ಇಲ್ಲದ ದೊಡ್ಡ ಪ್ರಮಾಣದಲ್ಲಿ ಹಣವನ್ನು ಕೊಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಬೇರೆ ಸರ್ಕಾರ ಇತ್ತು ಎಂದು ಯಾವುದೇ ಬೇಧ-ಭಾವವನ್ನು ಕೇಂದ್ರ ಸರ್ಕಾರ ಮಾಡಲಿಲ್ಲ. ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಡಲೇಬೇಕು. ಇಲ್ಲವಾದರೆ ರೈತ ಬದುಕುವುದಕ್ಕೆ ಸಾಧ್ಯವಿಲ್ಲ. ರೈತನಿಗೆ ವೈಜ್ಞಾನಿಕ ಬೆಲೆ ಸಿಗಬೇಕು. ಎಲ್ಲಾ ದೃಷ್ಟಿಯಿಂದ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ. ತಮ್ಮೆಲ್ಲರ ಸಲಹೆ ಮತ್ತು ಸಹಕಾರವನ್ನು ತೆಗೆದುಕೊಂಡು ನಾನು ಮುಂದಿನ ಹೆಜ್ಜೆಯನ್ನು ಇಡುತ್ತೇನೆಂಬ ಭರವಸೆಯನ್ನು ಕೊಟ್ಟು, ದಯವಿಟ್ಟು ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ. ಗೋವಿಂದ ರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕ್ರೀಡಾ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಕ್ರೀಡೆಗೆ ಮತ್ತು ಯುವಕರಿಗೆ ಯಾವ್ಯಾವ ವಿಭಾಗದಲ್ಲಿ, ಆದ್ಯತೆಯನ್ನು ಕೊಡಬೇಕೆಂಬುದರ ಬಗ್ಗೆ ನಮಗೆ ಪತ್ರವನ್ನು ಕಳುಹಿಸಿಕೊಡಿ ಅಥವಾ ಅದರ ಬಗ್ಗೆ ಚರ್ಚೆ ಮಾಡಿ. ದೇವರ ದಯೆಯಿಂದ ಯಾವುದಕ್ಕೂ ಕೊರತೆ ಇಲ್ಲ, ಯುವ ಸಮುದಾಯಕ್ಕೆ ನ್ಯಾಯ ಒದಗಿಸಿಕೊಡಬೇಕು. ಎಲ್ಲಾ ಸಮುದಾಯಕ್ಕೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ.

**ಡಾ||ಜಯಮಾಲ (ನಾಮನಿರ್ದೇಶಿತರು):-** ಮಾನ್ಯ ಮುಖ್ಯಮಂತ್ರಿಗಳೇ, ನಾನು ಖಂಡಿತವಾಗಿ ಮಹಿಳೆಯರ ಬಗ್ಗೆ ಮಾತ್ರ ಕೇಳುತ್ತಿಲ್ಲ. ಮಹಿಳೆಯರ ಜೊತೆ ಜೊತೆಯಲ್ಲಿ ಧ್ವನಿ ಇಲ್ಲದೇ ಇರುವಂತಹ ಅನೇಕ ವರ್ಗಗಳು ನಮ್ಮಲ್ಲಿ ಇವೆ. ಅದು ಬುದ್ಧಿಮಾಂದ್ಯ ವರ್ಗ ಇರಬಹುದು ಅಥವಾ ಅಂಗವಿಕಲರ ವರ್ಗ ಇರಬಹುದು ಅದಕ್ಕೆ ಹೆಚ್ಚಿನ ಅನುದಾನಗಳು ಬೇಕಾಗುತ್ತದೆ. ಅದರ ಜೊತೆಗೆ ನಮ್ಮಲ್ಲಿರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

transgenders ಇರಬಹುದು. ದಮನಿತರು ಇರಬಹುದು, ಅವರ ಬಗ್ಗೆ ಇರುವಂತಹ ತಾರತಮ್ಯವನ್ನು ಹೋಗಲಾಡಿಸಬೇಕು. ದಮನಿತರ ಬಗ್ಗೆ ನಮ್ಮ ಸರ್ಕಾರ ಈಗಾಗಲೇ ಒಂದು ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತಂದಿದೆ. ಆದರೆ ಅದಕ್ಕೆ ಹೆಚ್ಚಿನ ಅನುದಾನಗಳು ಬೇಕಾಗುತ್ತದೆ. ಈ ಸಲ ತಾವು ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಆದ್ಯತೆ ಮೇಲೆ ಹೆಚ್ಚಿನ ಅನುದಾನವನ್ನು ಕೊಟ್ಟು, ಪೋಷಣೆಯನ್ನು ಮಾಡಬೇಕೆಂದು ತಿಳಿಸುತ್ತಾ, ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವುದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಕೂಡ ಸಲ್ಲಿಸ ಬಯಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 3 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 3ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 3ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2019ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:–**ಈಗ ಸದನವನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲಾಗಿದೆ.

**(ರಾಷ್ಟ್ರಗೀತೆಯೊಂದಿಗೆ ಸದನವು ಸಂಜೆ 4 ಗಂಟೆ 27 ನಿಮಿಷಕ್ಕೆ ಅನಿರ್ದಿಷ್ಟಾವಧಿಯವರೆಗೆ ಮುಂದೂಡಲ್ಪಟ್ಟಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"